ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 283 RNI Number : KNKAN/25/A2770 27-10-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:283 ರಾಯಚೂರು 27-10-2026 ಮಂಗಳವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ಜಿಲ್ಲಾಡಳಿತ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಯುವಕರು ವಾಲ್ಮೀಕಿ ಜೀವನ ಚರಿತ್ರೆಯಿಂದ ಸ್ಫೂರ್ತಿ ಪಡೆಯಿರಿ: ಎಸ್ಪಿ ಅರುಣಾಂಗ್ಸು ಗಿರಿ

ರಾಯಚೂರು ಅ.26-

ಯುವ ಜನಾಂಗವು ದುಶ್ಚಟಗಳಿಂದ ದೂರ ಇರುವ ಮೂಲಕ ಮಹರ್ಷಿ ವಾಲ್ಮೀಕಿಯವರ ಜೀವನ ಚರಿತ್ರೆಯಿಂದ ಪ್ರತಿಯೊಬ್ಬರೂ ಸ್ಫೂರ್ತಿ ಪಡೆಯಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ ಅವರು ಹೇಳಿದರು.

ಅಕ್ಟೋಬರ್ 26ರ ಸೋಮವಾರ ದಂದು ನಗರದ ಆಶಾಪೂರ ರಸ್ತೆಯ ವಾಲ್ಮೀಕಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ವಾಲ್ಮೀಕಿಯವರು ಹಲವಾರು ವರ್ಷಗಳ ಕಾಲ ತಪಸ್ಸು ಮಾಡುವಾಗ ನಾರದ ಮುನಿಯವರು ಬಂದು ಅವರಿಗೆ ದರ್ಶನ ನೀಡಿದರು. ಬಳಿಕ ಅವರು ಮರಾ ಎಂಬ ಮಂತ್ರವನ್ನು ಜಪಿಸುತ್ತಾ 'ರಾಮ' ನಾಮವನ್ನು ಸಿದ್ಧಿಸಿಕೊಳ್ಳುವ ಮೂಲಕ ಮಹಾಕಾವ್ಯವಾದ ರಾಮಾಯಣವನ್ನು ರಚಿಸಿದರು.24,000



ಶ್ಲೋಕಗಳನ್ನು 7 ಭಾಗಗಳಲ್ಲಿ ರಚಿಸಿರುವ ರಾಮಾಯಣವು ನಮ್ಮ ಭಾರತ ವರ್ಷದ ಅತಿ ಪವಿತ್ರವಾದ ಗ್ರಂಥವಾಗಿದೆ ಎಂದರು.

ಇತಹ ಮಹಾನ್ ವ್ಯಕ್ತಿಯ ಜಯಂತಿಯನ್ನು ಆಚರಿಸುತ್ತಿರುವುದು ನಮ್ಮೆಲ್ಲರ ಭಾಗ್ಯವಾಗಿದೆ. ಜಿಲ್ಲೆಯಲ್ಲಿ ಇಂದಿನ ಯುವ ಜನತೆಯಲ್ಲಿ ಕುಡಿತ ಹಾಗೂ ಡ್ರಗ್ಸ್ ಸೇವನೆ ಅತಿ ಹೆಚ್ಚಾಗುತ್ತಿದ್ದು, ಇವುಗಳ ಸೇವನೆಯಿಂದ ದೈಹಿಕ ಹಲ್ಲೆ ಹಾಗೂ ಗುಂಪು ಘರ್ಷಣೆಗಳಂತಹ ಅಹಿತಕರ ಘಟನೆಗಳು ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಯುವಕರು ದಯಮಾಡಿ ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ವಾಲ್ಮೀಕಿ ಮಹರ್ಷಿಗಳು ತಮ್ಮ ವನವಾಸದಲ್ಲಿ ಆರ್ಚರಿ (ಧನುರ್ವೈದ್ಯ) ಕ್ರೀಡೆಯನ್ನು ಅಭಿವೃದ್ದಿಪಡಿಸಿಕೊಂಡತೆ, ಯುವಕರೂ ಯಾವುದಾದರೂ ಒಂದು ಕ್ರೀಡೆಯಲ್ಲಿ ಭಾಗಿಯಾಗಿ ನಿರತರಾಗಿ ದುಶ್ಚಟಗಳಿಂದ ದೂರವಿರಬೇಕು. ಅಲ್ಲದೆ ರಾಯಚೂರು ಜಿಲ್ಲೆಯಲ್ಲಿ ಹೆಲ್ಮೆಟ್ ಧರಿಸುವವರ ಸಂಖ್ಯೆ ಕಡಿಮೆಯಿದ್ದು, ಹೆಲ್ಮೆಟ್ ಧರಿಸದೆ ಸಂಚರಿಸಿ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಹೆಲ್ಮೆಟ್ ಕಡ್ಡಾಯವಾಗಿ ಧರಿಸುವುದು ಹಾಗೂ ಯಾವುದೇ ದುಶ್ಚಟಗಳಿಗೆ

3ನೇಯ ಪುಟಕ್ಕೆ

ಬಿ. ವೈ ವಿಜಯೇಂದ್ರ ವಿಜಯಪುರ ಜಿಲ್ಲೆ 371 ಜೆ ಸೇರ್ಪಡೆಗೆ ಬೆಂಬಲ: ಖಂಡನೆ

ರಾಯಚೂರು, ಅ. 26-

ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ಅವರು ವಿಜಯಪುರ ಜಿಲ್ಲೆಯನ್ನು ಸಂವಿಧಾನ 371 (ಜೆ) ವ್ಯಾಪ್ತಿಗೆ ಸೇರಿಸಲು ಬೆಂಬಲ ವ್ಯಕ್ತಪಡಿಸಿದಕ್ಕೆ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ರಾಜ್ಯ ಉಪಾಧ್ಯಕ್ಷರು ಡಾ. ರಝಾಕ್ ಉಸ್ತಾದ್ ತೀವ್ರವಾಗಿ ಖಂಡಿಸಿದ್ದಾರೆ.



ಕಲ್ಯಾಣ ಕರ್ನಾ ಕರ್ನಾಟಕಕ್ಕೆ ನೀಡಲಾದ ಸಂವಿಧಾನದ ಅನುಚ್ಛೇಧ 371ಜೆ ವ್ಯಾಪ್ತಿಗೆ ಸೇರಲು ಕರ್ನಾಟಕದ ಹಲವು ಪ್ರದೇಶಗಳು ಪ್ರಯತ್ನ ಮಾಡುತ್ತಿರುವ ನಡುವೆಯೇ ಬಿಜೆಪಿ ರಾಜ್ಯಧ್ಯಕ್ಷ ಬಿ.ವೈ ವಿಜಯೇಂದ್ರ ಇತ್ತೀಚಿಗೆ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿಗೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ 371ಜೆ ವ್ಯಾಪ್ತಿಗೆ ಸೇರಿಸುವ ಹೋರಾಟದ ವೇದಿಕೆಗೆ ಹೋಗಿ ವಿಜಯಪುರ ಜಿಲ್ಲೆಯನ್ನು 371 ವ್ಯಾಪ್ತಿಗೆ ಸೇರಿಸಲು ಸಹಕರಿಸುವದಾಗಿ ಒತ್ತಾಯಿಸುವದಾಗಿ ಮತ್ತು ಸರಕಾರಕ್ಕೆ ಹೇಳಿರುವದು ಕಲ್ಯಾಣ ಕರ್ನಾಟಕಕ್ಕೆ ಮಾಡುತ್ತಿರುವ ಅನ್ಯಾಯ ಮತ್ತು ಮೋಸ. ಈ ಹಿಂದೆ ಬಿಜೆಪಿ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ 371ಜೆ ತಿದ್ದುಪಡಿ ಸಾದ್ಯವಿಲ್ಲ ಎಂದು ತಿರಸ್ಕರಿಸಿತ್ತು, ಬಿಜೆಪಿ ಪಕ್ಷದ ಅಧ್ಯಕ್ಷ ವಿಜಯೇಂದ್ರ ಅವರು ಕಲ್ಯಾಣ ಕರ್ನಾಟಕಕ್ಕೆ ಕಾಂಗ್ರೆಸ್ ಸರಕಾರ ನೀಡಿರುವ 371ಜೆ ಬೇರೆಯವರಿಗೆ ಹಂಚಲು ಮುಂದಾಗಿರುವದು ಕಲ್ಯಾಣ ಕರ್ನಾಟಕ ವಿರೋಧಿ ಮನೋಭಾವನೆ ಮತ್ತು ಜನವಿರೋಧಿ ಮನಸ್ಥಿತಿ ಕಾಣುತ್ತಿದೆ.

ರಾಜ್ಯದ ಯಾವುದೇ ಪ್ರದೇಶಕ್ಕೆ ಸಂವಿಧಾನ ಅನುಚ್ಛೇಧ 371ರ ಅಡಿಯಲ್ಲಿ ಸೌಲಭ್ಯಬೇಕಿದ್ದಲ್ಲಿ ಬಿಜೆಪಿ ಪಕ್ಷದ ಅಧ್ಯಕ್ಷ ವಿಜಯೇಂದ್ರ ಆ ಪ್ರದೇಶಗಳಿಗೆ ಸಂವಿಧಾನದ 371ರ ತಿದ್ದುಪಡಿ ಮಾಡಿ 371ಕೆ, 3712 ಇತ್ಯಾದಿ ಕೊಡಿಸಲಿ, ಯಾವುದೇ ಕಾರಣಕ್ಕೂ ನಮ್ಮ ಪ್ರದೇಶದ ತಂಟೆಗೆ ಬರದಿರಲಿ, ಈಗಾಗಲೇ ಕಲ್ಯಾಣ ಕರ್ನಾಟಕದ ಜನತೆ ಕಳೆದ ಚುನಾವಣೆಯಲ್ಲಿ ಐದಕ್ಕೆ ಐದೂ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷಕ್ಕೆ ಮಣ್ಣು

3ನೇಯ ಪುಟಕ್ಕೆ

ಕಾರ್ಖಾನೆ ಮಾಲೀಕರ ಜೊತೆಗಿನ ಸಭೆ ; ರೈತರನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಮಾಲೀಕರು ವಿಫಲ: ಸಿಎಂ ಅಸಮಾಧಾನ

ಬೆಳಗಾವಿ: ರೈತ ಮುಖಂಡರೊಂದಿಗೆ ಚರ್ಚೆ ಮಾಡೋಣ, ಕಬ್ಬು ಬೆಳೆಗಾರರ ಬಗ್ಗೆ ಸಕ್ಕರೆ ಕಾರ್ಖಾನೆಗಳು ಹೃದಯ ಶ್ರೀಮಂತಿಕೆ ತೋರಬೇಕು. ಇಬ್ಬರೂ ಸೇರಿ ಒಂದು ತೀರ್ಮಾನಕ್ಕೆ ಬರೋಣ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮನವಿ ಮಾಡಿದ್ದಾರೆ.

ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆಗೆ ಮಹತ್ವದ ಸಭೆ ಕರೆಯಲಾಗಿತ್ತು. ಇಲ್ಲಿ 2 ಗಂಟೆಗೂ ಅಧಿಕ ಕಾಲ ಸಭೆ ನಡೆಯಿತು. ಸಭೆಯಲ್ಲಿ ಸಚಿವರಾದ ಎಂ.ಬಿ.ಪಾಟೀಲ್, ಸತೀಶ ಜಾರಕಿಹೊಳಿ, ಎಸ್.ಎಸ್.ಮಲ್ಲಿಕಾರ್ಜುನ, ಲಕ್ಷ್ಮಣ ಸವದಿ, ಚೆಲುವರಾಯಸ್ವಾಮಿ, ಸಂತೋಷ ಲಾಡ್, ರುದ್ರಪ್ಪ ಲಮಾಣಿ ಸೇರಿ ಮತ್ತಿತರರು ಪಾಲ್ಗೊಂಡಿದ್ದರು. ಸಕ್ಕರೆ ಕಾರ್ಖಾನೆ ಮಾಲೀಕರಾದ ಡಾ.ಪ್ರಭಾಕರ ಕೋರೆ, ಸಂಗಮೇಶ ನಿರಾಣಿ, ಶ್ರೀಮಂತ ಪಾಟೀಲ್, ಅಜಯ್ ಕುಮಾರ ಸರನಾಯಕ್ ಸೇರಿ 81 ಕಾರ್ಖಾನೆಗಳ ಮಾಲೀಕರು, ಅಧಿಕಾರಿಗಳು ಪಾಲ್ಗೊಂಡಿದ್ದರು.

ಕಾರ್ಖಾನೆ ಮಾಲೀಕರ ಜೊತೆ ಸಿಎಂ ಸಭೆ: ಕಾರ್ಖಾನೆ ಮಾಲೀಕ ಸಂಗಮೇಶ ನಿರಾಣಿ ಪ್ರತಿಕ್ರಿಯೆ ( )

ಸಭೆಯಲ್ಲಿ ಮಾತನಾಡಿರುವ ಮುಖ್ಯಮಂತ್ರಿ, ರೈತರ ಸಮಸ್ಯೆ, ಕಾರ್ಖಾನೆ ಸಮಸ್ಯೆಗಳನ್ನು ಆಲಿಸಿದ್ದೇವೆ. ಕೇಂದ್ರ ಸರ್ಕಾರ ರಚಿಸಿರುವ ಸಮಿತಿ ಪ್ರಗತಿ ಬಗ್ಗೆ ಸಂಸದರು ಹೇಳಿದ್ದಾರೆ. ಎಥನಾಲ್ ಮೊಲಾಸಿಸ್ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ನಮ್ಮ ರಾಜ್ಯದವರೇ ಆದ ಪ್ರಲ್ಹಾದ್ ಜೋಶಿಯವರು ಕೇಂದ್ರ ಸಚಿವರಿದ್ದು ಒತ್ತಡ ಹಾಕೋಣ. ಅವರಿಗೂ ಇಲ್ಲಿನ ಪರಿಸ್ಥಿತಿ ಗೊತ್ತಿದೆ. ಇಲ್ಲಿ ಆರೋಪ ಪ್ರತ್ಯಾರೋಪ ಮಾಡುವುದರಲ್ಲಿ ಅರ್ಥವಿಲ್ಲ. ಕಳೆದ ವರ್ಷ ವಾಹನಗಳಿಗೆ ಬೆಂಕಿ ಹಾಕಲಾಗಿತ್ತು, ಅಂತಹ ಘಟನೆ ಸಂಭವಿಸಬಾರದು ಎಂದರು.

ನಾವು ಯಾರ ಪರವೂ ಇಲ್ಲ. ಕಾರ್ಖಾನೆ ಇಲ್ಲವಾದರೆ ರೈತರಿಗೆ ತೊಂದರೆ. ರೈತರಿಲ್ಲ ಎಂದರೆ ಕಾರ್ಖಾನೆಗಳಿಗೆ ತೊಂದರೆ. ಹೀಗಾಗಿ ಎಲ್ಲರ ರಕ್ಷಣೆ ಮಾಡಬೇಕು. ನಾನು ಪ್ರಹ್ಲಾದ ಜೋಶಿ ಅವರನ್ನು ಭೇಟಿ ಮಾಡಿದ್ದೆ. ಅವರು ಕೂಡ ನಮ್ಮ ರಾಜ್ಯದ ರೈತರ ವಿಚಾರ ಎಂದು ಈ ಬಗ್ಗೆ ಗಮನ ಹರಿಸಿದ್ದಾರೆ. ಇದು ದೇಶದ ವಿಚಾರವಾಗಿದೆ. ಹೀಗಾಗಿ ಈ ವಿಚಾರದಲ್ಲಿ ರಾಷ್ಟ್ರ ಮಟ್ಟದಲ್ಲಿ ತೀರ್ಮಾನ ಮಾಡಬೇಕಿದೆ ಎಂದು ಡಿ.ಕೆ.ಶಿವಕುಮಾರ ಅಭಿಪ್ರಾಯ ಪಟ್ಟಿದ್ದಾರೆ.

ಕಾರ್ಖಾನೆ ಮಾಲೀಕರು ರೈತರನ್ನು ವಿಶ್ವಾಸಕ್ಕೆ ಪಡೆಯಬೇಕು: ಕೆಲವು ರಾಜ್ಯಗಳ ಚುನಾವಣೆ ಹಿನ್ನೆಲೆಯಲ್ಲಿ ತೀರ್ಮಾನ ಮಾಡುತ್ತಾರೆ. ಕಾರ್ಖಾನೆ ಮಾಲೀಕರು ರೈತರನ್ನು ವಿಶ್ವಾಸಕ್ಕೆ ಪಡೆಯಬೇಕು. ಅವರ ಆಕ್ರೋಶಕ್ಕೆ ಅವಕಾಶ ನೀಡಬಾರದು. ರೈತರನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಸಫಲರಾಗಿಲ್ಲ. ನಿಮಗೆ ಹೊರೆ ಆದರೂ ಒಂದು ಪರಿಹಾರಕ್ಕೆ ಬರುವ ತೀರ್ಮಾನ ಮಾಡಿ ಎಂದು ಸಿಎಂ ಸೂಚಿಸಿದ್ದಾರೆ.

ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ರೈತರ ಕೂಗಿಗೆ ಗೌರವ ನೀಡಿ ಕೆಲವು ತೀರ್ಮಾನಗಳನ್ನು ಮಾಡಿತ್ತು. ಸರ್ಕಾರ ಸ್ವಲ್ಪ ಹಣ ನೀಡುವುದು. ಉಳಿದದ್ದನ್ನು ಸಕ್ಕರೆ ಕಾರ್ಖಾನೆ ಮಾಲೀಕರು ನೀಡುವುದು ಎಂದು ಈ ಹಿಂದೆ ತೀರ್ಮಾನ ಆಗಿತ್ತು. ಶೇ.80ರಷ್ಟು ಕಾರ್ಖಾನೆಗಳು ಅದನ್ನು ಪಾಲಿಸಿವೆ. ಕೆಲವರು ಪಾಲಿಸಿಲ್ಲ. ಅವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ರೈತರು, ಮಾಲೀಕರ ರಕ್ಷಣೆ ಮಾಡಬೇಕಾದ ಜವಾಬ್ದಾರಿ ಸರ್ಕಾರಗಳ ಮೇಲಿವೆ. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಬಿಹಾರ, ಉತ್ತರ ಪ್ರದೇಶ ಸೇರಿದಂತೆ ಬೇರೆ ರಾಜ್ಯಗಳಲ್ಲೂ ಈ ಸಮಸ್ಯೆ ಕಾಡುತ್ತಿದೆ ಎಂದರು.

10 ವರ್ಷಗಳಿಂದ ಸಕ್ಕರೆ ಬೆಲೆ ಏರಿಕೆ ಆಗಿಲ್ಲ. ಕೇಂದ್ರ ಸಚಿವರು ನಮ್ಮ ರಾಜ್ಯದವರೇ ಆಗಿದ್ದು, ಅವರು ತಮ್ಮದೇ ಆದ ಪ್ರಯತ್ನ ಮಾಡುತ್ತಿದ್ದಾರೆ. ಪ್ರತಿಭಟನೆ ಸಮಯದಲ್ಲಿ ನಾನು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರು ಕಿತ್ತೂರಿನಲ್ಲಿ ರೈತರನ್ನು ಭೇಟಿ ಮಾಡಿ ಅವರ ಅಹವಾಲು ಆಲಿಸಿದ್ದೇವೆ. 10 ವರ್ಷಗಳಿಂದ ಬೆಲೆ ಏರಿಕೆ ಆಗಿಲ್ಲ. ಇದರಿಂದ ರೈತರಿಗೆ ನಷ್ಟ ಹೆಚ್ಚಾಗಿದೆ. ಹೀಗಾಗಿ ಪ್ರತಿ ಟನ್ ಕಬ್ಬಿಗೆ 6 ಸಾವಿರವರೆಗೂ ಬೆಲೆ ನಿಗದಿ ಮಾಡಿ ಪರಿಹಾರ ನೀಡಿ ಎಂದು ರೈತರು ಬೇಡಿಕೆ ಇಟ್ಟಿದ್ದಾರೆ. ಇದಕ್ಕೆ ಪರಿಹಾರ ನೀಡಬೇಕಾಗಿರುವುದು ಸಕ್ಕರೆ ಕಾರ್ಖಾನೆಗಳು, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಎಂದು ಡಿ.ಕೆ.ಶಿವಕುಮಾರ ವಿವರಿಸಿದ್ದಾರೆ.

ರಾಜ್ಯದಲ್ಲಿ ಶಾಂತಿ ಕಾಪಾಡುವುದು ನಮ್ಮ ಕರ್ತವ್ಯ. ಇಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಅನೇಕ ಸಮಸ್ಯೆಗಳಿವೆ. ಹಣಕಾಸು, ಬ್ಯಾಂಕ್, ಎಥನಾಲ್, ವಿದ್ಯುತ್ ಬೆಲೆ ಸಮಸ್ಯೆ ಸೇರಿ ಅನೇಕ ವಿಚಾರಗಳಿವೆ. ಹೀಗಾಗಿ ನಾನೊಬ್ಬನೇ ತೀರ್ಮಾನ ಮಾಡಲು ಆಗುವುದಿಲ್ಲ. ಹೀಗಾಗಿ ಎಲ್ಲರ ಜತೆ ಚರ್ಚಿಸುತ್ತೇನೆ ಎಂದು ರೈತರ ಬಳಿ ಸಮಯ ಕೇಳಿದ್ದೆ. ಇಂದು ಇಡೀ ಸರ್ಕಾರ ನಿಮ್ಮ ಮುಂದೆ ಬಂದು ಕೂತಿದೆ. ಶಾಸಕರು ಹಾಗೂ ಸಂಸದರಿಗೆ ತಮ್ಮದೇ ಆದ ಒತ್ತಡಗಳು ಇರುತ್ತವೆ. ಈ ಸಮಸ್ಯೆಗೆ ಸೌಹಾರ್ದತೆ ಮೂಲಕ ಪರಿಹಾರ ಕಂಡು ಹಿಡಿಯಬೇಕು. ಇದು ರಾಜಕಾರಣ ಮಾಡುವ ಸಭೆಯಲ್ಲ. ಅದಕ್ಕೆ ಬೇರೆ ವೇದಿಕೆಗಳಿವೆ ಎಂದು ಕಾರ್ಖಾನೆ ಮಾಲೀಕರಿಗೆ ಡಿ.ಕೆ.ಶಿವಕುಮಾರ ಕಿವಿಮಾತು ಹೇಳಿದ್ದಾರೆ.

ನಾವು ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲು ವಾರ್ಷಿಕ 20 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದ್ದು, ಈ ವರ್ಷ 32 ಸಾವಿರ ಕೋಟಿ ನೀಡಬೇಕಾಗಿದೆ. ಮಳೆ ಕೊರತೆ ಹಿನ್ನೆಲೆಯಲ್ಲಿ ರೈತರು ಹೆಚ್ಚು ವಿದ್ಯುತ್

3ನೇಯ ಪುಟಕ್ಕೆ

ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳು ಇಂದಿನ ಸಮಾಜಕ್ಕೆ ಮಾರ್ಗದರ್ಶಿ-ಎಸ್.ಎಂ.ಶಫಿ

ಹಟ್ಟಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಹಟ್ಟಿ ಚಿನ್ನದ ಗಣಿ: ಹಟ್ಟಿ ಪಟ್ಟಣದ ಶ್ರೀ ಮಹರ್ಷಿ ವಾಲ್ಮೀಕಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಭಕ್ತಿಭಾವ ಹಾಗೂ ಗೌರವದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ವಾಲ್ಮೀಕಿ ಸಮಾಜದ ಮುಖಂಡರು ಹಾಗೂ ಗಣ್ಯರು ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಜಯಂತಿ ಆಚರಣೆಗೆ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಶಫಿ ಅವರು,ಮಹನೀಯರ ಆದರ್ಶಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಹೇಳಿದರು.

ಮಹರ್ಷಿ ವಾಲ್ಮೀಕಿ ಅವರು ತಮ್ಮ ಸಾಹಿತ್ಯದ ಮೂಲಕ ಮಾನವೀಯತೆ,ಸತ್ಯ,ಧರ್ಮ,ಹಾಗೂ ನೈತಿಕ ಮೌಲ್ಯಗಳನ್ನು ಜಗತ್ತಿಗೆ ಸಾರಿದ್ದಾರೆ.ಅವರ ಜೀವನ ಸಂದೇಶಗಳು ಇಂದಿನ ಸಮಾಜಕ್ಕೂ ಮಾರ್ಗದರ್ಶಿಯಾಗಿದ್ದು,ಪ್ರತಿಯೊಬ್ಬರೂ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ನಂತರ ಮಾತನಾಡಿದ ಶಿವರಾಜ ಗೌಡ ಗುರಿಕಾರ ಅವರು,ಮಹರ್ಷಿ ವಾಲ್ಮೀಕಿ ಅವರು ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ;ಇಡೀ ಮನುಕುಲಕ್ಕೆ ಮಾರ್ಗದರ್ಶನ ನೀಡಿದ ಮಹಾನ್ ದಾರ್ಶನಿಕರು ಎಂದು ಹೇಳಿದರು.

ರಾಮಾಯಣ ಮಹಾಕಾವ್ಯದ ಮೂಲಕ ಮೌಲ್ಯಯುತ ಬದುಕು,ಧರ್ಮನಿಷ್ಠೆ,ಸತ್ಯ ಮತ್ತು ಮಾನವೀಯತೆಯ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ.ಅಂತಹ ಮಹಾನ್ ದಾರ್ಶನಿಕರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು.ಅವರ ವಿಚಾರಧಾರೆಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಾರ್ಮಿಕ

3ನೇಯ ಪುಟಕ್ಕೆ

ಎಲ್‌ಬಿಎಸ್ ನಗರದಲ್ಲಿ ಕೊಲೆ ಆರೋಪಿ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯ

ರಾಯಚೂರು, ಅ. 26-

ನಗರದ ಎಲ್.ಬಿ.ಎಸ್. ನಗರ 'ದಲ್ಲಿ ನಡೆದ ಕೊಲೆ ಪ್ರಕರಣದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಅಕ್ರಮ ಗಾಂಜಾ ಮಾರಾಟ ತಡೆಯಲು ಗಸ್ತು ಹೆಚ್ಚಳ ಹಾಗೂ ಯುವಜನರಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಜಾಗೊ ರಾಯಚೂರು ಮುಖಂಡರು ಎಸ್ಪಿ ಮನವಿ ಸಲ್ಲಿಸಿ ಒತ್ತಾಯಿಸಿದೆ.


ರಾಯಚೂರಿನಲ್ಲಿ ಸಾರ್ವಜನಿಕ ಸುರಕ್ಷತೆ ಮತ್ತು ಅಪರಾಧ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಉದ್ಭವಿಸಿರುವ ಗಂಭೀರ ಪರಿಸ್ಥಿತಿಯತ್ತ, ವಿಶೇಷವಾಗಿ ಇತ್ತೀಚೆಗೆ ನಡೆದ ದುರಂತ ಘಟನೆಗಳ

ಹಿನ್ನೆಲೆಯಲ್ಲಿ, ನಿಮ್ಮ ಗಮನ ಸೆಳೆಯಲು ನಾನು ಈ ಪತ್ರವನ್ನು



ಬರೆಯುತ್ತಿದ್ದೇನೆ. ಮೊದಲನೆಯದಾಗಿ, ರಾಯಚೂರಿನ ಎಲ್.ಬಿ.ಎಸ್. ನಗರದಲ್ಲಿ ನಡೆದ ಅಮಾಯಕ ನಿವಾಸಿಯೊಬ್ಬರ ಬರ್ಬರ ಕೊಲೆಗೆ ಕಾರಣರಾದವರ ವಿರುದ್ಧ ತ್ವರಿತ, ಕಠಿಣ ಮತ್ತು ನಿಷ್ಪಕ್ಷಪಾತ ಕಾನೂನು ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ. ಈ ಭೀಕರ ಘಟನೆಯು ಸ್ಥಳೀಯ ನಿವಾಸಿಗಳಲ್ಲಿ ತೀವ್ರ ಭಯ ಮತ್ತು ಆತಂಕವನ್ನು ಉಂಟುಮಾಡಿದೆ. ಈ ಪ್ರಕರಣದ ಸಮಗ್ರ ತನಿಖೆ ನಡೆಸಲು, ಆರೋಪಿಗಳನ್ನು ಕೂಡಲೇ ಬಂಧಿಸಲು ಮತ್ತು ನ್ಯಾಯಾಲಯದಲ್ಲಿ ಪ್ರಕರಣವನ್ನು ಬಲವಾಗಿ ಮಂಡಿಸಿ, ಅಪರಾಧಿಗಳಿಗೆ ಕಠಿಣ ಶಿಕ್ಷೆ ದೊರಕಿಸಿಕೊಡಲು ವಿಶೇಷ ತಂಡವೊಂದನ್ನು ನಿಯೋಜಿಸಬೇಕೆಂದು ವಿನಂತಿಸುತ್ತೇನೆ. ಇದಲ್ಲದೆ, ರಾಯಚೂರಿನ ವಿವಿಧ ಬಡಾವಣೆಗಳಲ್ಲಿ ಮಾದಕ ವಸ್ತುಗಳ ಬಳಕೆ, ವಿಶೇಷವಾಗಿ ಗಾಂಜಾದ ಅಕ್ರಮ ಮಾರಾಟ ಮತ್ತು ಸೇವನೆಯು ಹೆಚ್ಚಾಗಿರುವುದು ಕಂಡುಬರುತ್ತಿದೆ. ಮಾದಕ ವಸ್ತುಗಳ ಈ ಹಾವಳಿಯು ನಮ್ಮ ನಗರದಲ್ಲಿ ಹಿಂಸಾತ್ಮಕ ಅಪರಾಧಗಳು, ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಕೃತ್ಯಗಳು ಮತ್ತು ಸಮಾಜ ವಿರೋಧಿ ನಡವಳಿಕೆಗಳು ಹೆಚ್ಚಾಗಲು ನೇರ ಕಾರಣವಾಗಿದೆ. ಆದ್ದರಿಂದ, ಮಾದಕ ವಸ್ತುಗಳ ಪೂರೈಕೆ ಜಾಲವನ್ನು ಬುಡಸಮೇತ ಕಿತ್ತೊಗೆಯಲು ವಿಶೇಷ ಕಾರ್ಯಾಚರಣೆಗಳು ಮತ್ತು ದಾಳಿಗಳನ್ನು ನಡೆಸುವಂತೆ ಹಾಗೂ ಕಠಿಣ ನಿಗಾ ವಹಿಸುವಂತೆ ಕೋರುತ್ತೇನೆ. ಅಂತಿಮವಾಗಿ, ಯುವಜನರು ಮಾದಕ ವಸ್ತುಗಳ ಚಟಕ್ಕೆ ಬಲಿಯಾಗುವುದನ್ನು ತಡೆಯಲು, ರಾಯಚೂರಿನ ಶಾಲೆಗಳು, ಕಾಲೇಜುಗಳು ಮತ್ತು ಯುವಕರು ಹೆಚ್ಚಾಗಿ ಸೇರುವ ಸ್ಥಳಗಳಲ್ಲಿ ನಿಯಮಿತವಾಗಿ ಜಾಗೃತಿ ಅಭಿಯಾನಗಳು ಹಾಗೂ ಮಾರ್ಗದರ್ಶನ ಕಾರ್ಯಕ್ರಮಗಳನ್ನು

3ನೇಯ ಪುಟಕ್ಕೆ



ಶ್ರೀ ತಬಲಾ ವಿದ್ಯಾಲಯದಲ್ಲಿ ದಾಸವಾಣಿ

ದಾಸಸಾಹಿತ್ಯ ಭಕ್ತಿಯ ಸೌರಭ, ಜ್ಞಾನದ ಬೆಳಕು: ಶ್ರೀಪಾದರಾವ್ ಕುಲಕರ್ಣಿ

ರಾಯಚೂರು

ದಾಸಸಾಹಿತ್ಯವು ಕನ್ನಡದ ಆಧ್ಯಾತ್ಮಿಕ ಪರಂಪರೆಯ ಪ್ರತೀಕವಾಗಿದ್ದು, ಭಕ್ತಿಯ ಸೌರಭ ಹಾಗೂ ಜ್ಞಾನದ ಬೆಳಕನ್ನು ಪಸರಿಸುವ ಮಹತ್ವದ ಸಾಹಿತ್ಯವಾಗಿದೆ ಎಂದು ಶ್ರೀ ತಬಲಾ ವಿದ್ಯಾಲಯದ ಸಂಗೀತ ಶಿಕ್ಷಕ ಶ್ರೀಪಾದರಾವ್ ಕುಲಕರ್ಣಿ ಹೇಳಿದರು.

ನಗರದ ಶ್ರೀ ತಬಲಾ ವಿದ್ಯಾಲಯದಲ್ಲಿ ಆಯೋಜಿಸಿದ್ದ ದಾಸವಾಣಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳಲ್ಲಿ ತಬಲಾ ವಾದನದ ಆಸಕ್ತಿ ಬೆಳೆಸುವುದರ ಜೊತೆಗೆ ದಾಸಸಾಹಿತ್ಯವನ್ನು ಇನ್ನಷ್ಟು ಜನಪ್ರಿಯಗೊಳಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದಾಸಸಾಹಿತ್ಯದ ಮಹತ್ವ ಹಾಗೂ ಅದನ್ನು ಉಳಿಸಿ ಬೆಳೆಸುವಲ್ಲಿ ಪ್ರತಿಯೊಬ್ಬರ ಜವಾಬ್ದಾರಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಗೀತ ವಿದ್ಯಾಲಯದ

3ನೇಯ ಪುಟಕ್ಕೆ

ವಾಲ್ಮೀಕಿ ಮಹರ್ಷಿಯವರು ರಾಜಾಶ್ರಯ ಕವಿಗಳಲ್ಲ, ತಮ್ಮ ಕಾವ್ಯದಿಂದಲೇ ರಾಜಾಧಿರಾಜರಿಗೆ ಆಶ್ರಯದಾತರಾದ ಕವಿಶ್ರೇಷ್ಠರು - ಪ್ರೊ.ಕರಿಗೂಳಿ

ಗಂಗಾವತಿ ತಾಲೂಕಿನ ಶ್ರೀರಾಮನಗರದ ಚಿಲುಕೂರಿ ನಾಗೇಶ್ವರ ರಾವ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ 26 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸರಳವಾಗಿ ಆದರೆ ತುಂಬಾ ಅರ್ಥಗರ್ಭಿತವಾಗಿ ಆಚರಿಸಲಾಯಿತು,

ಪ್ರಾಂಶುಪಾಲರು, ಪ್ರಾಧ್ಯಾಪಕರು, ಉಪನ್ಯಾಸಕರು ಹಾಗೂ ಆಡಳಿತ ಸಿಬ್ಬಂದಿ ಸೇರಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪ ನಮನದ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು. ಪ್ರಾರಂಭದಲ್ಲಿ ಡಾ.ವಿರುಪಾಕ್ಷ ಕೆ.ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಮಹರ್ಷಿ ವಾಲ್ಮೀಕಿ ರವರು ದೇಶ ಕಂಡ ಶ್ರೇಷ್ಠ ಕವಿಯೋತ್ತಮ ಹಾಗೂ ಮಹಾನ್ ನಾಯಕರು ತದನಂತರ ಮೂಲತಃ ವಾಲ್ಮೀಕಿ ರವರು ದರೋಡೆಕೋರರು ಎನ್ನುವ ವಾದವನ್ನು ನಿರಾಧಾರವಾದುದು ಹಾಗೂ ಸುಳ್ಳು, ಏಕೆಂದರೆ ಅವರೊಬ್ಬ ಜಗತ್ತಿಗೆ ಮಹಾನ್ ಕಾವ್ಯ ರಾಮಾಯಣವನ್ನು ನೀಡಿದ ಆದಿಕವಿ ಎಂದು ಸ್ಮರಿಸಿದರು. ನಂತರ ಮಾತನಾಡಿದ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶಂಕರಪ್ಪ ಅವರು ವಿದ್ಯಾರ್ಥಿಗಳಿಗೆ ಮಹರ್ಷಿ ವಾಲ್ಮೀಕಿ ತಮ್ಮ ಅಗಾಧವಾದಂತಹ ಜ್ಞಾನಾಮೃತವನ್ನು ಭಾರತೀಯ ಸಮಾಜಕ್ಕೆ ನೀಡಿದವರು, ಒಬ್ಬ ಶ್ರೇಷ್ಠ ರಾಜ,



ಸತಿಪತಿಗಳ ಸಂಬಂಧ,ಸಹೋದರರ ಪ್ರೀತಿ ಮತ್ತು ವಿಶ್ವಾಸ ಹಾಗೂ ಇತರ ಶ್ರೇಷ್ಠ ಮೌಲ್ಯ ಆಗರ ರಾಮಾಯಣ ಮಹಾ ಕಾವ್ಯ ಎಂದರು, ಕವಿ ಮಹರ್ಷಿ ಶ್ರೀ ವಾಲ್ಮೀಕಿ ಅಕ್ಷರ ಜ್ಞಾನಕ್ಕೆ ಇರುವ ಮೌಲ್ಯ ಅರಿತು ವಿದ್ಯಾರ್ಥಿಗಳು ತಮ್ಮ ಜೀವನವನ್ನು ಉನ್ನತ ಮಾರ್ಗದಲ್ಲಿ ನಡೆಯುವತೆ ಕಿವಿ ಮಾತು ಹೇಳಿದರು,

ತದನಂತರ ಮಹಾವಿದ್ಯಾಲಯದ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ವೀರೇಶ್ ರವರು ಮಾತನಾಡಿ ರಾಮಾಯಣ ಮಹಾ ಕಾವ್ಯ ಸಮಾಜದ ಮೌಲ್ಯಗಳಿಗೆ ಹಿಡಿದ ಕನ್ನಡಿಯಾಗಿದೆ ಅಂತ ಶ್ರೇಷ್ಠ ಕಾವ್ಯ ರಚಿಸಿದ ಮುನಿಯೋತ್ತಮನನ್ನು ಈ ಸಂದರ್ಭದಲ್ಲಿ ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಕರಿಗೂಳಿ ಅವರು ಮಾತನಾಡುತ್ತಾ,ಮಹರ್ಷಿ ವಾಲ್ಮೀಕಿ ರಚಿಸಿರುವ ಶ್ರೇಷ್ಠ

3ನೇಯ ಪುಟಕ್ಕೆ

ಸ್ವಾತಂತ್ರ್ಯ ಹೋರಾಟಗಾರರ ಬದುಕು, ಕೃತಿಗಳು ಮಕ್ಕಳಿಗೆ ಪ್ರೇರಣೆ: ಯಶೋಧಾ ಕಟಕೆ



ಕಲಬುರಗಿ:

ಸ್ವಾತಂತ್ರ್ಯ ಹೋರಾಟಗಾರರ ಬದುಕು ಮತ್ತು ಸಾಧನೆಗಳು ಮಕ್ಕಳಿಗೆ ಪ್ರೇರಣೆಯಾಗುವುದರ ಜೊತೆಗೆ, ಅಂತಹ ಮಹಾನ್ ವ್ಯಕ್ತಿಗಳು ರಚಿಸಿದ ಕೃತಿಗಳು ದೇಶಪ್ರೇಮ, ಪ್ರೀತಿ, ಸೌಹಾರ್ದ ಹಾಗೂ ಮಾನವೀಯ ಮೌಲ್ಯಗಳನ್ನು ಬೋಧಿಸುತ್ತವೆ ಎಂದು ನಗರದ ರಾಘವೇಂದ್ರ ಪೊಲೀಸ್ ಠಾಣೆಯ ಪಿಎಸ್‌ಐ ಯಶೋಧಾ ಕಟಕೆ ಹೇಳಿದರು.

ನಗರದ ಸೈಯದ್ ಚಿಂಚೋಳಿಯ ಚಂದ್ರಶೇಖರ್ ಪಾಟೀಲ್ ರೇವೂರ್ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಶ್ರೀಮತಿ ಬಾಲಮ್ಮ ಮಹಾದೇವಪ್ಪ ಕಡೇಚೂರ್ ಟ್ರಸ್ಟ್ ವತಿಯಿಂದ ಶನಿವಾರ (ಅ. 24) ಆಯೋಜಿಸಿದ್ದ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದಿವಂಗತ ಮಹಾದೇವಪ್ಪ ಕಡೇಚೂರ್ ಅವರು ಮಕ್ಕಳಿಗಾಗಿ ಬರೆದ ಅಯ್ಯನ ಕಥೆಗಳು ಕೃತಿಯನ್ನು ಶಾಲೆಗಳಿಗೆ ಹಸ್ತಾಂತರಿಸುವ ಅಭಿಯಾನದ ನಾಲ್ಕನೇ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳು ನಾಳಿನ ಪ್ರಜೆಗಳಾಗಿದ್ದು, ದೇಶದ ಸಂಪತ್ತಾಗಿದ್ದಾರೆ. ರಾಷ್ಟ್ರಭಕ್ತ ಮಕ್ಕಳ ನಿರ್ಮಾಣಕ್ಕೆ ಉತ್ತಮ ಪುಸ್ತಕಗಳ ಓದು ಅಗತ್ಯ. ಸ್ವಾತಂತ್ರ್ಯ ಹೋರಾಟಗಾರರು, ಸೈನಿಕರು, ಹೆತ್ತ ತಂದೆ-ತಾಯಿ ಹಾಗೂ ರೈತರು ಮಕ್ಕಳಿಗೆ ಆದರ್ಶಪ್ರಾಯರಾಗಬೇಕು. ತ್ರಿವರ್ಣ ಧ್ವಜ ಹಾರಾಡುವ ಹಿಂದೆ ಸೈನಿಕರ ತ್ಯಾಗಮಯ ಬದುಕಿದೆ. ಮಕ್ಕಳು ಸ್ವತಂತ್ರವಾಗಿ ಬದುಕಲು ಹೆತ್ತವರ ಕೊಡುಗೆ ಅಪಾರವಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆ, ಹಾಗೂ ಅವರು ರಚಿಸಿದ ಕೃತಿಗಳು ಮಕ್ಕಳ ಸಾಧನೆಗೆ ಪ್ರೇರಣೆ ನೀಡುತ್ತವೆ ಎಂದು ಹೇಳಿದರು.

ಪುಸ್ತಕ ಜ್ಞಾನ ವಿಸ್ತರಣೆಗೆ ಮೂಲ :

ಪುಸ್ತಕಗಳ ಓದು ಮನಸ್ಸಿಗೆ ಮುದ ನೀಡುವುದರ ಜೊತೆಗೆ ಜ್ಞಾನ ಮತ್ತು ತಿಳುವಳಿಕೆಯನ್ನು ಹೆಚ್ಚಿಸುತ್ತದೆ ಎಂದು ಖ್ಯಾತ ಕಥೆಗಾರ್ತಿ ಹಾಗೂ ಸಾಹಿತಿ ಸಂಧ್ಯಾ ಹೊನಗುಂಟಿಕರ್ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಮನೆಗಳಲ್ಲಿ ಅಜ್ಜ-ಅಜ್ಜಿಯರಿಂದ ಕಥೆಗಳನ್ನು ಕೇಳುವುದು ಹಾಗೂ ಪುಸ್ತಕಗಳನ್ನು ಓದುವುದರಿಂದ ಮಕ್ಕಳ ಕಲ್ಪನಾಶಕ್ತಿ ವಿಸ್ತರಿಸುತ್ತದೆ ಮತ್ತು ಸಾಧನೆ ಮಾಡಲು ಪ್ರೋತ್ಸಾಹ ದೊರೆಯುತ್ತದೆ ಎಂದರು.

ಪುಸ್ತಕಗಳ ಬಗ್ಗೆ ಪ್ರೀತಿ ಮತ್ತು ಗೌರವ ಬೆಳೆಸಿಕೊಂಡಾಗ ಅವು ಜ್ಞಾನವನ್ನು ಹೆಚ್ಚಿಸುತ್ತವೆ. ಸಾಧನೆ ಮಾಡಲು ವ್ಯಕ್ತಿತ್ವಕ್ಕೆ ಪ್ರೇರಣೆ ನೀಡುತ್ತವೆ. ಅಯ್ಯನ ಕಥೆಗಳು ಕೃತಿಯು ಮಕ್ಕಳ ಆಸಕ್ತಿಗೆ ಅನುಗುಣವಾಗಿ ಹಾಸ್ಯ, ಪರಿಸರ, ಪ್ರಾಣಿ, ದೆವ್ವ ಹಾಗೂ ನೀತಿಬೋಧಕ ಕಥೆಗಳನ್ನು ಒಳಗೊಂಡಿದೆ. ಮಕ್ಕಳು ಈ ಕಥೆಗಳನ್ನು ಓದುವ ಮೂಲಕ ಜ್ಞಾನವಂತರಾಗಬೇಕು ಎಂದು ಕಥೆಗಳ ಮೂಲಕ ತಿಳಿಹೇಳಿದರು.

ಶಾಲೆಯ ಅಧ್ಯಕ್ಷೆ ಸುನಿತಾ ಅನಿಲ್ ಕುಮಾರ್ ಡಾಂಗೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ನಿರ್ದೇಶಕ ಅನಿಲ್ ಕುಮಾರ್ ಡಾಂಗೆ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರು ರಚಿಸಿದ ಕೃತಿಗಳನ್ನು ಮಕ್ಕಳ ಕೈಗೆ ತಲುಪಿಸುವುದು ಉತ್ತಮ ಕಾರ್ಯ ಎಂದು ಶ್ಲಾಘಿಸಿದರು.

ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ ಡಾ. ಸದಾನಂದ ಪೆರ್ಲ ಪ್ರಾಸ್ತಾವಿಕವಾಗಿ ಮಾತನಾಡಿ, ನಗರದ ಶಾಲೆಗಳ ಜೊತೆಗೆ ಗ್ರಾಮೀಣ ಪ್ರದೇಶದ ಶಾಲೆಗಳಿಗೂ ಈ ಕೃತಿಗಳನ್ನು ಹಸ್ತಾಂತರಿಸುವ ಉದ್ದೇಶವಿದೆ ಎಂದು ತಿಳಿಸಿದರು.

ಇದೇ ಶಾಲೆಯಲ್ಲಿ ವ್ಯಾಸಂಗ ಮಾಡಿ ಈ ವರ್ಷ ಹೋಮಿಯೋಪತಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆದ ರುಚಿತಾ ಡಾಂಗೆ ಅವರನ್ನು ಕಾರ್ಯಕ್ರಮದಲ್ಲಿ ವಿಶೇಷವಾಗಿ ಸನ್ಮಾನಿಸಲಾಯಿತು. ಮುಖ್ಯಗುರು ಸುನಿತಾ ಪೂಜಾರಿ, ಟ್ರಸ್ಟಿ ಮಹೇಶ್ ಕಡೇಚೂರ್, ಶಿಕ್ಷಕರಾದ ಜಗದೇವಿ, ಉಮಾದೇವಿ, ಪ್ರಿಯಾಂಕಾ, ಚೆನ್ನಮ್ಮ, ಶಿವಲೀಲಾ ಹಾಗೂ ಐಶ್ವರ್ಯ ಉಪಸ್ಥಿತರಿದ್ದರು. ಶಾಲೆಯ ಆಡಳಿತಾಧಿಕಾರಿ ಸುಚೇತ್ ಡಾಂಗೆ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ವಿದ್ಯಾರ್ಥಿಗಳಿಗೆ ಸಿಹಿತಿಂಡಿ ಹಂಚಲಾಯಿತು.

ಮಕ್ಕಳಿಗೆ ಕಥೆ ಹೇಳುವ ಸ್ಪರ್ಧೆ :

ಮಕ್ಕಳಲ್ಲಿ ಕಥೆ ಹಾಗೂ ಓದಿನ ಬಗ್ಗೆ ಆಸಕ್ತಿ ಹೆಚ್ಚಿಸಲು ಶಾಲೆಯಲ್ಲಿ ಪ್ರತಿ ಶನಿವಾರ ಅಯ್ಯನ ಕಥೆಗಳು ಕೃತಿಯ ಕಥೆಗಳು ಸೇರಿದಂತೆ ಇತರ ಪುಸ್ತಕಗಳ ಕಥೆ ಹೇಳುವ ಸ್ಪರ್ಧೆ ಆಯೋಜಿಸಲಾಗುವುದು. ಉತ್ತಮವಾಗಿ ಕಥೆ ಪ್ರಸ್ತುತಪಡಿಸುವ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಗೌರವಿಸುವ ಸಂಪ್ರದಾಯವನ್ನು ಆರಂಭಿಸಲಾಗುವುದು ಎಂದು ಶಾಲೆಯ ಆಡಳಿತಾಧಿಕಾರಿ ಸುಚೇತ್ ಡಾಂಗೆ ತಿಳಿಸಿದರು.



ಬೀದರ್‌ನ ಜಾನಪದ ಗಾಯಕ ದೇವದಾಸ ಚಿಮಕೋಡಗೆ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ

ಬೀದರ್,

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ವತಿಯಿಂದ ಮಂಡ್ಯ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ವಾರ್ಷಿಕ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೀದರ್ ಜಿಲ್ಲೆಯ ಹಿರಿಯ ಜಾನಪದ ಗಾಯಕ ದೇವದಾಸ ಚಿಮಕೋಡ ಅವರಿಗೆ ಪ್ರತಿಷ್ಠಿತ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಳೆದ ಸುಮಾರು 35 ವರ್ಷಗಳಿಂದ ಜಾನಪದ ಕಲೆಯ ಉಳಿವು ಮತ್ತು ಬೆಳವಣಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ದೇವದಾಸ ಚಿಮಕೋಡ ಅವರು, ತಮ್ಮದೇ ಆದ ಕಲಾ ತಂಡವನ್ನು ಕಟ್ಟಿಕೊಂಡು ಬೀದರ್ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಹಾಗೂ ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಜಾನಪದ ಕಲಾ ಪ್ರದರ್ಶನಗಳನ್ನು ನೀಡಿದ್ದಾರೆ. ಅವರ ಈ ಸಾಧನೆ ಬೀದರ್ ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ.

ದೇವದಾಸ ಚಿಮಕೋಡ ಅವರು ಸ್ವತಃ ಹಾಡುಗಳನ್ನು ರಚಿಸಿ, ಅವುಗಳಿಗೆ ರಾಗ ಸಂಯೋಜನೆ ಮಾಡುತ್ತಾರೆ. ಡಫಲಿ ನುಡಿಸುತ್ತಾ ಹಾಡುವ ವಿಶಿಷ್ಟ ಶೈಲಿ ಅವರದ್ದಾಗಿದೆ. ಸಾಮಾಜಿಕ ಜಾಗೃತಿ ಮೂಡಿಸುವ ಉದ್ದೇಶದಿಂದ ವಿವಿಧ ವಿಷಯಗಳ ಕುರಿತು 40ಕ್ಕೂ ಹೆಚ್ಚು ಹಾಡುಗಳನ್ನು ರಚಿಸಿ ಹಾಡಿರುವ ಅವರು, ಜನಜಾಗೃತಿ ಹಾಡುಗಳ ಪುಸ್ತಕವನ್ನೂ ಪ್ರಕಟಿಸಿದ್ದಾರೆ. ತಮ್ಮ ಗಾಯನದ ಮೂಲಕ ಜನರಲ್ಲಿ ಅರಿವು ಮೂಡಿಸುತ್ತಿರುವ ಅವರು, ಜಿಲ್ಲೆಯ ಅನೇಕ ಕಲಾವಿದರಿಗೆ ಪ್ರೇರಣೆಯಾಗಿದ್ದಾರೆ.

ಮಂಡ್ಯದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ. ಕೆ.ಎಂ. ವಸುಂಧರಾ ಅವರು ದೇವದಾಸ ಚಿಮಕೋಡ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ್ ಸೋನಾರೆ, ಅಕಾಡೆಮಿ ರಿಜಿಸ್ಟ್ರಾರ್ ಶೃತಿ ಎಂ. ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಕಬ್ಬಿಗೆ ಏಕರೂಪ ದರ ನಿಗದಿಗೆ ಆಗ್ರಹ: ಅ.27ರಂದು ಹೆದ್ದಾರಿ ಬಂದ್ ಎಚ್ಚರಿಕೆ

ಅಫಜಲಪುರ:

ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಈಡೇರಿಸದಿದ್ದರೆ ಅ.27ರಂದು ಕಲಬುರಗಿವಿಜಯಪುರ ಹೆದ್ದಾರಿಯನ್ನು ಅಫಜಲಪುರದ ಅಂಬೇಡ್ಕರ್ ವೃತ್ತದಲ್ಲಿ ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ರೈತ ಮುಖಂಡರು ಎಚ್ಚರಿಕೆ ನೀಡಿದ್ದಾರೆ. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸ್ವಾಭಿಮಾನಿ ಕಬ್ಬು ಬೆಳೆಗಾರರ ಹೋರಾಟ ಸಮಿತಿ ಹಾಗೂ ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಡೆದ ಸಭೆಯಲ್ಲಿ ರೈತ ಮುಖಂಡರು ಭಾಗವಹಿಸಿ, ಕಬ್ಬು ಬೆಳೆಗಾರರ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಿ ಹಲವು ನಿರ್ಣಯಗಳನ್ನು ಕೈಗೊಂಡರು.

ಅಕ್ಟೋಬರ್ 26ರಂದು ಬೆಳಗಾವಿಯಲ್ಲಿ ರಾಜ್ಯದ ಮುಖ್ಯಮಂತ್ರಿ ನೇತೃತ್ವದಲ್ಲಿ ಕಬ್ಬಿನ ಬೆಂಬಲ ಬೆಲೆ ಕುರಿತು ಸಭೆ ನಡೆಯಲಿದೆ. ಈ ಸಭೆಯಲ್ಲಿ ರೈತರ ಬೇಡಿಕೆಗಳನ್ನು ಈಡೇರಿಸದಿದ್ದರೆ ಹಾಗೂ ರಾಜ್ಯಾದ್ಯಂತ ಕಬ್ಬಿಗೆ ಏಕರೂಪ ದರ ನಿಗದಿಪಡಿಸದಿದ್ದರೆ ಈ ಭಾಗದ ರೈತರಿಗೆ ಮಲತಾಯಿ ಧೋರಣೆ ತೋರಿದಂತಾಗುತ್ತದೆ ಎಂದು ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ರೈತರ ಬೇಡಿಕೆಗಳನ್ನು ನಿರ್ಲಕ್ಷಿಸಬಾರದು. ಕಲಬುರಗಿ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬಿಗೆ ಏಕರೂಪದ ದರ ನಿಗದಿಪಡಿಸಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶೀಘ್ರವಾಗಿ ಸಕ್ಕರೆ ಕಾರ್ಖಾನೆಗಳ ಆರಂಭಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬೋರ್‌ವೆಲ್ ನೀರಿನ ಆಧಾರದ ಮೇಲೆ ಬೆಳೆದಿರುವ ಕಬ್ಬಿನ ಬೆಳೆಗಳು ಒಣಗುತ್ತಿದ್ದು, ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನ.1ರಿಂದಲೇ ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ರೈತ ಮುಖಂಡರಾದ ರಮೇಶ್ ಶೆಟ್ಟಿ, ಶಾಂತು ಅಂಜುಟಗಿ, ಭೀಮರಾಯ ಗೌರ, ಅಣ್ಣಾರಾಯ ಪಾಟೀಲ್, ಗುರು ಚಾಂದಕವಟೆ, ಶರಣ ಪ್ರಸಾದ್ ನೂಲ, ಗುರು ಹುಲ್ಲೂರು, ಗುರು ದತ್ತ ಪೂಜಾರಿ, ಚಂದು ಬನ್ನೆಟ್ಟಿ, ಭೀಮರಾಯ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬಸವಧಾಮ ಪ್ರಶಿಕ್ಷಣ ಕೇಂದ್ರ ನಿರ್ಮಾಣ : ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮೀಜಿ



ಕಲಬುರಗಿ:

ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಹಾಗೂ ಉದ್ಯಮಶೀಲತೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಬಸವಧಾಮ ಪ್ರಶಿಕ್ಷಣ ಕೇಂದ್ರ ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮೀಜಿ ಹೇಳಿದರು.

ನಗರದ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ (ಕೆಕೆಸಿಸಿಐ) ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯಮಟ್ಟದ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ಬಸವಧಾಮದ ಲೋಗೋ ಅನಾವರಣಗೊಳಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ತರಬೇತಿ ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ಮಿಲಿಟರಿ ಹಾಗೂ ರೈಲ್ವೆ ಸೇರಿದಂತೆ ವಿವಿಧ ಕ್ಷೇತ್ರಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರವೇಶ ಪರೀಕ್ಷೆ ನಡೆಸಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅವರ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ವಾರ್ಷಿಕ ಕನಿಷ್ಠ 1 ರೂ. ನಿಂದ ತರಬೇತಿ ಶುಲ್ಕ ನಿಗದಿಪಡಿಸುವ ಉದ್ದೇಶವಿದೆ. ಈ ಮೂಲಕ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಗುಣಮಟ್ಟದ ತರಬೇತಿ ಪಡೆಯಲು ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಮೊದಲ ಹಂತದಲ್ಲಿ 1,000 ವಿದ್ಯಾರ್ಥಿಗಳಿಗೆ ಹಾಗೂ 1,000 ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕ್ಯಾಂಪಸ್‌ಗಳನ್ನು ನಿರ್ಮಿಸುವ ಯೋಜನೆಯಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ವಸತಿ, ಹಾಸ್ಟೆಲ್ ಹಾಗೂ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗುವುದು. ಆಧುನಿಕ ಶಿಕ್ಷಣ ಸೌಲಭ್ಯಗಳೊಂದಿಗೆ ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಿಸಲಾಗುವುದು ಎಂದು ಹೇಳಿದರು.

ಕೇಂದ್ರದಲ್ಲಿ ಡಿಜಿಟಲ್ ಮತ್ತು ಭೌತಿಕ ಗ್ರಂಥಾಲಯಗಳು, ಲಕ್ಷಾಂತರ ಪ್ರಶ್ನೆಪತ್ರಿಕೆಗಳನ್ನು ಒಳಗೊಂಡ ಡಿಜಿಟಲ್ ಸರ್ವರ್ ವ್ಯವಸ್ಥೆ, ಕಂಪ್ಯೂಟರ್ ಲ್ಯಾಬ್ ಹಾಗೂ ಭಾಷಾ ಪ್ರಯೋಗಾಲಯಗಳನ್ನು ಸ್ಥಾಪಿಸುವ ಉದ್ದೇಶವಿದೆ. ಇದರಿಂದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಅಗತ್ಯವಾದ ಅಧ್ಯಯನ ಸಾಮಗ್ರಿ ಮತ್ತು ತಾಂತ್ರಿಕ ಸೌಲಭ್ಯಗಳು ಒಂದೇ ಸೂರಿನಡಿ ಲಭ್ಯವಾಗಲಿವೆ ಎಂದರು.

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಯ ಜೊತೆಗೆ ಯುವಕರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಸ್ಟಾರ್ಟ್‌ಅಪ್ ಮತ್ತು ಸ್ಟ್ಯಾಂಡ್‌ಅಪ್ ಯೋಜನೆಗಳ ಕುರಿತು ತರಬೇತಿ ನೀಡಲಾಗುವುದು. ದೇಶ-ವಿದೇಶಗಳ ಉದ್ಯಮಿಗಳೊಂದಿಗೆ ಸಂವಾದ ಏರ್ಪಡಿಸಿ, ಯುವಕರ ಕೌಶಲ್ಯ ಅಭಿವೃದ್ಧಿ ಹಾಗೂ ಸ್ವಾವಲಂಬನೆಗೆ ಉತ್ತೇಜನ ನೀಡಲಾಗುವುದು ಎಂದು ಶ್ರೀಗಳು ವಿವರಿಸಿದರು. ಗುಜರಾತ್‌ನ ಸರ್ದಾರ್ ಧಾಮ ಮಾದರಿಯಲ್ಲಿ ಬಸವಧಾಮ ಶಿಕ್ಷಣ ಕೇಂದ್ರವನ್ನು ಅಂದಾಜು 150 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವ ಯೋಜನೆ ರೂಪಿಸಲಾಗಿದೆ. ಮೊದಲ ಹಂತದಲ್ಲಿ ಹುಬ್ಬಳ್ಳಿ ಅಥವಾ ಬೆಳಗಾವಿ ಸಮೀಪ ಸೂಕ್ತ ಜಾಗ ಗುರುತಿಸಿ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ. ಮುಂದಿನ ಹಂತಗಳಲ್ಲಿ ರಾಜ್ಯದ 14 ಜಿಲ್ಲೆಗಳ ಸಹಕಾರದೊಂದಿಗೆ ಯೋಜನೆಯನ್ನು ವಿಸ್ತರಿಸಿ, ಹೆಚ್ಚಿನ ವಿದ್ಯಾರ್ಥಿಗಳಿಗೆ ಇದರ ಪ್ರಯೋಜನ ತಲುಪಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಚಂದು ಪಾಟೀಲ, ಶಿವರಾಜ್ ನಿಂಗನಶೆಟ್ಟಿ, ಸಂತೋಷ್, ಶಶಿಕಾಂತ ಪಾಟೀಲ, ಬಸವರಾಜ್ ದಿಗ್ಗಾಂವಿ, ರಾಚನಗೌಡ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾನಾಗೇಂದ್ರ, ಮಸೂತಿ ಅವರಿಗೆ ಅಧಿಕೃತ ಆಹ್ವಾನ



ಕಲಬುರಗಿ:

ನಗರದ ವಿಶ್ವೇಶ್ವರಯ್ಯ ಭವನದಲ್ಲಿ ಅ28 ಮತ್ತು 29ರಂದು ನಡೆಯಲಿರುವ ಕಲಬುರಗಿ ಜಿಲ್ಲಾ 23ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಹಿರಿಯ ಸಾಹಿತಿ ಡಾ ನಾಗೇಂದ್ರ ಮಸೂತಿ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಅವರ ನಿವಾಸದಲ್ಲಿ ಸತ್ಕರಿಸಿ, ಸಮ್ಮೇಳನಕ್ಕೆ ಅಧಿಕೃತವಾಗಿ ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ, ಕಳೆದ ನಾಲ್ಕು ದಶಕಗಳಿಂದ ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳನ್ನು ಜ್ಯೋತಿ ಜ್ಯೋತಿಯಾಗಿ ಮುನ್ನಡೆಸಿಕೊಂಡು ಬರಲಾಗುತ್ತಿದೆ ಜಿಲ್ಲೆಯ ಪ್ರತಿಭಾವಂತರನ್ನು ಗುರುತಿಸಿ ಅವರಿಗೆ ವೇದಿಕೆ ಕಲ್ಪಿಸುವ ಕಾರ್ಯವನ್ನು ಪರಿಷತ್ತು ನಿರಂತರವಾಗಿ ಮಾಡುತ್ತಿದೆ ಕನ್ನಡ ಸಾರಸ್ವತ ಲೋಕಕ್ಕೆ ಡಾ ನಾಗೇಂದ್ರ ಮಸೂತಿ ಅವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ಅವರನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಸಮ್ಮೇಳನದ ಅಧಿಕೃತ ಆಹ್ವಾನ ಸ್ವೀಕರಿಸಿ ಮಾತನಾಡಿದ ನಿಯೋಜಿತ ಸಮ್ಮೇಳನಾಧ್ಯಕ್ಷ ಡಾನಾಗೇಂದ್ರ, ಮಸೂತಿ, ಕಳೆದ ಹಲವು ದಿನಗಳಿಂದ ಜಿಲ್ಲೆಯಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿದೆ ಆದರೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ ಪಾಟೀಲ್ ತೇಗಲತಿಪ್ಪಿ ಅವರು ನಿತ್ಯ ನೂತನವಾಗಿ ಆಯೋಜಿಸುತ್ತಿರುವ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಮಾಜಮುಖಿ ಚಟುವಟಿಕೆಗಳಿಗೆ ಎಂದಿಗೂ ಬರವಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕನ್ನಡ ನಾಡು-ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಹಗಲಿರುಳು ಶ್ರಮಿಸುತ್ತಿರುವ ತೇಗಲತಿಪ್ಪಿ ಹಾಗೂ ಅವರ ಬಳಗಕ್ಕೆ ಮತ್ತಷ್ಟು ಬಲ ತುಂಬಬೇಕಾಗಿದೆ ವಿಶೇಷ ಹಾಗೂ ವೈವಿಧ್ಯಮಯ ಸಮ್ಮೇಳನಗಳ ಮೂಲಕ ತೆರೆಮರೆಯಲ್ಲಿರುವ ಪ್ರತಿಭಾವಂತ ಲೇಖಕರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಅವರು ಮಾಡುತ್ತಿದ್ದಾರೆ ಈ ಮೂಲಕ ಕನ್ನಡ ಸಾಹಿತ್ಯ ಪರಿಷತ್ತನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯುತ್ತಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷ ಬಸವರಾಜ ಬಳೂಂಡಗಿ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಂತೋಷ ಗಂಗೂ, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಮುಡುಬಿ ಗುಂಡೇರಾವ, ಪ್ರಾಧ್ಯಾಪಕ ಡಾ ಶಿವಶರಣಪ್ಪ ಮೋತಕಪಳ್ಳಿ, ಜಿಲ್ಲಾ ಕಸಾಪದ ಶಿವರಾಜ ಅಂಡಗಿ, ಧರ್ಮಣ್ಣ ಎಚ್ ಧನ್ನಿ, ರವೀಂದ್ರಕುಮಾರ ಭಂಟನಳ್ಳಿ, ಸಿದ್ದಲಿಂಗ ಬಾಳಿ, ವಿದ್ಯಾಸಾಗರ ದೇಶಮುಖ, ಶಿವಲೀಲಾ ಕಲಗುರ್ಕಿ, ಸೈಯ್ಯದ್ ನಜಿರುದ್ದಿನ್ ಮುತ್ತವಲ್ಲಿ, ಮಹಾದೇವ ಬಡಾ, ಈರಣ್ಣ ಸೋನಾರ, ಪರಮಾನಂದ ಸರಸಂಬಿ, ಬಂಗಾರಪ್ಪ ಆಡಿನ್, ಮಹಾಲಿಂಗಯ್ಯ ಸ್ವಾಮಿ, ರಾಜೇಂದ್ರ ಮಾಡಬೂಳ, ಹಣಮಂತರಾವ ಪೆಂಚನಪಳ್ಳಿ, ಅನೀಲಕುಮಾರ ಪಾಟೀಲ, ಕುಪೇಂದ್ರ ಬರಗಾಲಿ, ಜ್ಯೋತಿ ಹಿರೇಮಠ, ಮಹಾನಂದಾ ಹುಲಿ, ವೆಂಕುಬಾಯಿ ರಜಪೂತ, ಪ್ರೊ ಎಸ್‌ಎಲ್ ಪಾಟೀಲ, ಶಿವಕುಮಾರ ಬಿದರಿ, ಮಲ್ಲಿನಾಥ ಸಂಗಶೆಟ್ಟಿ, ರೇವಯ್ಯ ಸ್ವಾಮಿ, ಜಯಶ್ರೀ ಜಮಾದಾರ, ಸಮರೀನ್ ಶೇಖ್, ಡಾ ರೆಹಮಾನ್ ಪಟೇಲ್, ಬಾಬಾ ಫಕ್ರುದ್ದೀನ್, ಮಹ್ಮದ್ ಅಯಾಜೋದ್ದಿನ್ ಪಟೇಲ್, ಬಿಎಂ ಪಾಟೀಲ ಕಲ್ಲೂರ, ಪ್ರಭುಶೆಟ್ಟಿ ಮುದ್ದಾ, ಪದ್ಮಾವತಿ ನಾಯಕ್ ಹಾಗೂ ದಿನೇಶ ಮದಕರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಇನ್ನೂ ಸಿಕ್ಕಿಲ್ಲ: ಸಚಿವ ಎಂ.ಬಿ.ಪಾಟೀಲ್



ಬಸವಕಲ್ಯಾಣ:

ಅನುಭವ ಮಂಟಪ ನಿರ್ಮಿಸುವ ಮೂಲಕ ವಿಶ್ವಗುರು ಬಸವಣ್ಣನವರು ಸಾಮಾಜಿಕ ಚಳವಳಿಗೆ ನಾಂದಿ ಹಾಡಿದರು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದರು.

ನಗರದ ಹೊರವಲಯದಲ್ಲಿರುವ ಬಸವಧರ್ಮ ಪೀಠದ ಬಸವ ಮಹಾಮನೆ ಆವರಣದಲ್ಲಿ ನಡೆದ 25ನೇ ವರ್ಷದ ಕಲ್ಯಾಣದ ಪರ್ವ ರಜತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸಮಾಜ ಚಿಂತನಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರು ವಿವಿಧ ಕಾಯಕ ವರ್ಗಗಳ ಸಮುದಾಯದವರನ್ನು ಒಗ್ಗೂಡಿಸಿ, ವಚನಗಳ ಮೂಲಕ ಬಸವ ಧರ್ಮವನ್ನು ಸ್ಥಾಪಿಸಿದರು. 12ನೇ ಶತಮಾನದಲ್ಲೇ ಅಂತರ್ಜಾತಿ ವಿವಾಹ ಹಾಗೂ ಮಹಿಳೆಯರ ಸಮಾನತೆಗಾಗಿ ಹೋರಾಟ ನಡೆಸಿದರು. ಸಮಾಜದಲ್ಲಿನ ಅನಿಷ್ಟ ಪದ್ಧತಿಗಳು ಮತ್ತು ಶೋಷಣೆಯನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಆದರೂ ಇದುವರೆಗೆ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಲಿಂಗಾಯತರನ್ನು ಈಗಲೂ ಶೂದ್ರರಂತೆ ನೋಡಲಾಗುತ್ತಿದೆ. ಒಳಗೊಳಗೇ ಲಿಂಗಾಯತ ಧರ್ಮವನ್ನು ತುಳಿಯುವ ಕೆಲಸ ನಡೆಯುತ್ತಿದೆ. ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ದೊರೆತರೆ ಮುಂದಿನ ಪೀಳಿಗೆಗೆ ಒಳಿತಾಗಲಿದೆ ಎಂದು ಅವರು ತಿಳಿಸಿದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಬಸವಣ್ಣನವರ ಆದರ್ಶಗಳನ್ನು ಇಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಕಳೆದ 25 ವರ್ಷಗಳಿಂದ ಕಲ್ಯಾಣದ ಪರ್ವ ಆಯೋಜಿಸಲಾಗುತ್ತಿದೆ. ಮಾನವ ಬಂಧುತ್ವ ವೇದಿಕೆಯ ಮೂಲಕ ಬುದ್ಧ ಮತ್ತು ಬಸವಣ್ಣನವರ ತತ್ವಾದರ್ಶಗಳನ್ನು ಮನೆಮನೆಗೆ ತಲುಪಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದರು.

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ದೊರಕಿಸಲು ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಕಾಣದ ಕೈಗಳು ಇದಕ್ಕೆ ಅಡ್ಡಿಯಾಗುತ್ತಿವೆ. ಲಿಂಗಾಯತರೆಲ್ಲರೂ ಜಾಗೃತರಾಗಿ ಧರ್ಮಕ್ಕಾಗಿ ಹೋರಾಟ ಮಾಡಬೇಕಾಗಿದೆ. ಬಸವಣ್ಣನವರ ಇತಿಹಾಸವನ್ನು ಅಳಿಸುವ ಪ್ರಯತ್ನಗಳು ಈಗ ನಡೆಯುತ್ತಿವೆ. ಆದ್ದರಿಂದ ಎಲ್ಲರೂ ಒಗ್ಗಟ್ಟಾಗಿ ಬಸವಣ್ಣನವರನ್ನು ಆದರ್ಶವಾಗಿಟ್ಟುಕೊಂಡು ಹೋರಾಟ ಮಾಡುವುದು ಅಗತ್ಯವಾಗಿದೆ ಎಂದು ಬಸವಾನುಯಾಯಿಗಳಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಡಾ. ಮಾತೆ ಗಂಗಾದೇವಿ, ಡಾ. ಶಿವಾನಂದ ಮಹಾಸ್ವಾಮಿ, ಬಸವ ಹರಳಯ್ಯ ಸ್ವಾಮಿ, ಮಹದೇಶ್ವರ್ ಸ್ವಾಮಿ, ಬಸವಯೋಗಿ ಸ್ವಾಮಿ, ಅನಿಮಿಶಾನಂದ ಸ್ವಾಮಿ, ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ, ಮಾಜಿ ಸಚಿವ ಎಚ್. ಆಂಜನೇಯ, ಶಾಸಕರಾದ ರಹೀಂ ಖಾನ್, ಶರಣು ಸಲಗರ್, ಶೈಲೇಂದ್ರ ಬೆಲ್ದಾಳೆ, ಸಿದ್ದು ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಚಂದ್ರಶೇಖರ್ ಪಾಟೀಲ್, ಭೀಮರಾವ್ ಪಾಟೀಲ್, ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯ್ ಸಿಂಗ್, ರಂಜಾನ್ ದರ್ಗಾ, ಶಿವಶರಣಪ್ಪ ಹುಗ್ಗೆ ಪಾಟೀಲ್, ಧನರಾಜ್ ತಾಳಂಪಳ್ಳಿ ಹಾಗೂ ಬಸವರಾಜ್ ಬುಳ್ಳಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಕಾರ್ಖಾನೆ ಮಾಲೀಕರ ಜೊತೆಗಿನ ಸಭೆ ; ರೈತರನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಮಾಲೀಕರು ವಿಫಲ: ಸಿಎಂ ಅಸಮಾಧಾನ

ಬಳಸುತ್ತಿದ್ದಾರೆ. ಕಬ್ಬು ಇಳುವರಿ ಕಡಿಮೆಯಾಗಿದೆ. ಸಕ್ಕರೆ ಉತ್ಪಾದನೆ ಕುಸಿದಿದೆ. ಇಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಮಸ್ಯೆಗಳಿವೆ. ನಮಗೆ ರೈತರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರ ಬದುಕು ಮುಖ್ಯ. ನಾನು ಮಹಾರಾಷ್ಟ್ರ ಸಿಎಂ ಜತೆಗೂ ಚರ್ಚೆ ಮಾಡಿದ್ದು, ಈ ವಿಚಾರ ಬಗೆಹರಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ ಎಂದರು.

ಸಕ್ಕರೆ ಕಾರ್ಖಾನೆ ಮಾಲೀಕ ಸಂಗಮೇಶ ನಿರಾಣಿ ಹೇಳಿದ್ದಿಷ್ಟು: ಸಭೆ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಸಕ್ಕರೆ ಕಾರ್ಖಾನೆ ಮಾಲೀಕ ಸಂಗಮೇಶ ನಿರಾಣಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದ ಹಲವು ವಿಚಾರಗಳ ಕುರಿತು ಚರ್ಚೆ ನಡೆಸಲಾಗಿದೆ. ರೈತರು, ಸಕ್ಕರೆ ಕಾರ್ಖಾನೆಗಳು ಹಾಗೂ ಸರ್ಕಾರದ ನಡುವೆ ಸಮನ್ವಯತೆ ಕಾಪಾಡುವ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚೆ ನಡೆದಿದೆ ಎಂದರು.

ರೈತರು ಹಾಗೂ ಸಕ್ಕರೆ ಕಾರ್ಖಾನೆಗಳ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಹಲವು ಪ್ರಮುಖ ವಿಚಾರಗಳನ್ನು ಸಭೆಯಲ್ಲಿ ಚರ್ಚಿಸಲಾಗಿದೆ. ರೈತರು ಮತ್ತು ಕಾರ್ಖಾನೆಗಳು ಎರಡೂ ಉಳಿಯುವಂತಹ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಾತುಕತೆ ನಡೆದಿದೆ. ಇನ್ನೂ ಕೆಲವು ವಿಚಾರಗಳ ಕುರಿತು ಚರ್ಚೆ ನಡೆಸಬೇಕಿರುವುದರಿಂದ ಸಂಜೆ ಮತ್ತೊಮ್ಮೆ ಸಭೆ ನಡೆಯಲಿದೆ. ಸಂಜೆ ನಡೆಯುವ ಸಭೆಯಲ್ಲಿ ಸಮಸ್ಯೆಗಳಿಗೆ ಪರಿಹಾರ ದೊರೆಯುವ ನಿರೀಕ್ಷೆಯಿದೆ ಎಂದು ಸಂಗಮೇಶ ನಿರಾಣಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಯುವಕರು ವಾಲ್ಮೀಕಿ ಜೀವನ ಚರಿತ್ರೆಯಿಂದ ಸ್ಫೂರ್ತಿ ಪಡೆಯಿರಿ

ಬಲಿಯಾಗದೆ ಉತ್ತಮ ವಿದ್ಯೆ ಕಲಿತು, ಆರ್ಥಿಕ, ಸಾಮಾಜಿಕ ಹಾಗೂ ಸರ್ಕಾರಿ ಚಟುವಟಿಕೆಗಳಲ್ಲಿ ಯಶಸ್ಸು ಸಾಧಿಸಿ ದೇಶದ ಅಭಿವೃದ್ಧಿಗೆ ಯುವಕರು ಶ್ರಮಿಸಬೇಕು ಎಂದರು.

ಈ ವೇಳೆ ಉಪನ್ಯಾಸಕರಾಗಿ ಡಾ.ಬಸವರಾಜ ಮಾತನಾಡಿ, ರಾಯಚೂರು ವಿಶ್ವವಿದ್ಯಾನಿಲಯವನ್ನು ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ಅಂತಹ ನಾಮಕರಣ ಆಯಿತು, ಅದರ ಒಳಗೆ ವಾಲ್ಮೀಕಿ ಅಧ್ಯಯನ ಪೀಠವನ್ನು ಸ್ಥಾಪಿಸಬೇಕು. ವಾಲ್ಮೀಕಿ ಪೀಠ ಅಧ್ಯಯನದ ಅಗತ್ಯ ಹಿನ್ನೆಲೆಯಲ್ಲಿಯೇ ನಾವು ವಾಲ್ಮೀಕಿ ಸಮುದಾಯದ ಅಧ್ಯಯನವನ್ನು ಮಾಡುವಂತಹ ಅವಕಾಶಗಳು ಸಿಗುತ್ತವೆ ಎಂದರು.

ಮಹರ್ಷಿ ವಾಲ್ಮೀಕಿಯು ಮಾನವತಾ ವಾದವನ್ನು ಹೇಳಿದ್ದಾರೆ. ಮನುಷ್ಯತ್ವವನ್ನು ಪ್ರತಿಪಾನೆ ಮಾಡಿದ್ದಾರೆ, ಕರುಣೆಯನ್ನು ಪ್ರತಿಪಾದನೆ ಮಾಡಿದ್ದಾರೆ. ವಾಲ್ಮೀಕಿ ಸಮುದಾಯದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರಕಾರ ತರಬೇತಿ ನೀಡುವ ವ್ಯವಸ್ಥೆಇದೆ. ವಿದ್ಯಾರ್ಥಿಗಳಿಗೆ ಸರಕಾರದಿಂದ ಪ್ರೋತ್ಸಾಹ ಧನ ಸಿಗ್ತಾ ಇದೆ. ಮತ್ತು ಸರಳ ವಿವಾಹಗಳಿಗೆ ಪ್ರೋತ್ಸಾಹಧನ ಇದೆ. ಉದ್ಯಮ ಆರಂಭ ಮಾಡಲಿಕ್ಕೆ ಸಾಲ ಸೌಲಭ್ಯಗಳು ಕೂಡ ಇವೆ. ಮತ್ತು ಅರಣ್ಯ ಹಕ್ಕುಕಾಯ್ದೆ ಅಡಿಯಲ್ಲಿ ಭೂಮಿ ಇಲ್ಲದೆ ಇರುವಂತವರಿಗೆ ಭೂಮಿಯನ್ನು ಪಡೆದುಕೊಳ್ಳುವ ಅವಕಾಶಗಳು ಇವೆ. ಇವುಗಳನ್ನು ಸಮಾಜದವರು ಸದ್ಬಳಿಕೆ ಮಾಡಿಕೊಳ್ಳಬೇಕೆಂದರು.

ಈ ವೇಳೆ ಸಮಾಜದ ಪ್ರತಿಭಾವಂತ ಹತ್ತನೇ ತರಗತಿ, ಪಿಯುಸಿ, ಡ್ರಿಗಿ, ಮಾಸ್ಟರ್ ಡ್ರಿಗಿ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಗಣ್ಯರಿಂದ ಸನ್ಮಾನಿಸಿ ಗೌರವಿಸಲಾಯಿತು.

★ಜಿಲ್ಲಾಧಿಕಾರಿಗಳಿಂದ ಮಾಲಾರ್ಪಣೆ:★ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ರಾಯಚೂರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಹತ್ತಿರದ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿಗೆ ಜಿಲ್ಲಾಧಿಕಾರಿ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯು ಬಸವೇಶ್ವರ ವೃತ್ತ, ಡಾ.ಬಿ.ಆರ್.ಅಂಬೇಡ್ಕರ್ ರೈಲ್ವೇ ನಿಲ್ದಾಣ, ಆಶಾಪೂರ ರಸ್ತೆ ಮಾರ್ಗವಾಗಿ ವಾಲ್ಮೀಕಿ ಭವನಕ್ಕೆ ಬಂದು ತಲುಪಿತು. ಮೆರವಣಿಗೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿವಿಧ ಕಲಾ ತಂಡಗಳನ್ನು ಆಯೋಜನೆ ಮಾಡಲಾಗಿತ್ತು.

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತ ಮುರಳೀಧರ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಶಾವಂತಗೇರ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಿವಮಾನಪ್ಪ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಸುನೀತಾ, ದೇವದುರ್ಗ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಬಿ.ವೈ.ವಾಲ್ಮೀಕಿ, ನಿವೃತ್ತ ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ವೆಂಕಟೇಶ, ಸಮಾಜದ ಮುಖಂಡರಾದ ರಘುವೀರ್ ನಾಯಕ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು, ಸಮಾಜದವರು ಇದ್ದರು.

ದಾಸಸಾಹಿತ್ಯ ಭಕ್ತಿಯ ಸೌರಭ, ಜ್ಞಾನದ ಬೆಳಕು: ಶ್ರೀಪಾದರಾವ್ ಕುಲಕರ್ಣಿ

ವಿದ್ಯಾರ್ಥಿಗಳಿಂದ ತಬಲಾ ವಾದನ ನಡೆಯಿತು. ಪ್ರಸನ್ನ ಕೀಲಿ, ವೆಂಕಟಲಕ್ಷ್ಮಿ ಅವರು ಗಾಯನದ ಮೂಲಕ ಗಮನ ಸೆಳೆದರು. ತಬಲಾ ವಾದಕರಾದ ಪಾಂಡುರಂಗಾಚಾರ್ಯ ರಾಜಪುರೋಹಿತ್, ಮೃತ್ಯುಂಜಯ ಸ್ವಾಮಿ, ಶ್ರೀಧರ್ ಕುಲಕರ್ಣಿ, ಹಾರ್ಮೋನಿಯಂ ವಾದಕ ಶ್ರೀಪಾದರಾವ್ ಕುಲಕರ್ಣಿ, ತಾಳವಾದಕರಾದ ರವಿ ಕುಲಕರ್ಣಿ, ಪ್ರಕಾಶ್, ಪ್ರಶಾಂತ್, ರಮಾಕಾಂತ್, ರಾಘವೇಂದ್ರ ಹಾಗೂ ಗೋಪಾಲ್ ಕಾರ್ಯಕ್ರಮಕ್ಕೆ ಸಂಗೀತದ ಮೆರುಗು ನೀಡಿದರು.

ಶ್ರೀ ತಬಲಾ ವಿದ್ಯಾಲಯದ ವಿದ್ಯಾರ್ಥಿಗಳಾದ ಚೆನ್ನವೀರಯ್ಯ ವಸ್ತ್ರದ್, ಶ್ರೀನಿಕೇತನ್ ಭಟ್, ಸಂಜೀತ್ ಗೋನಾಳ್, ಜಿತೇಂದ್ರ ದೇಸಾಯಿ, ವೈಭವ್ ಹಾಗೂ ನರಸಿಂಹ ರೈ ಸೇರಿದಂತೆ ಪಾಲಕರು ಉಪಸ್ಥಿತರಿದ್ದರು.

ವಿಜಯೇಂದ್ರ, ವಿಜಯಪುರ ಜಿಲ್ಲೆ 371 ಜೆ ಸೇರ್ಪಡೆಗೆ ಬೆಂಬಲ: ಖಂಡನೆ

ಮುಕ್ಕಿಸಿದ್ದಾರೆ, ಇದೇ ರೀತಿ ಮುಂದುವರೆದರೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಈ ಭಾರ 1 ಬುಡ ಸಮೇತ ಕಿತ್ತು ಹಾಕುತ್ತಾರೆ ಕರ್ನಾಟಕದ ಸುತ್ತ ಇರುವ ಎಲ್ಲಾ ಜಿಲ್ಲೆಗಳಿಗೆ ಹಂಚುತ್ತ ಕೂಡಲು ಇದೇನು ಅಂಗಡಿಯಲ್ಲಿ ಸಿಗುವ ಚಾಕೋಲೇಟ್ ಅಂದುಕೊಂಡಿದ್ದಾರೆ. ಈ ರೀತಿಯ ಹೇಳಿಕೆ ನೀಡಿದರೆ ಕಂಡಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ವಾಲ್ಮೀಕಿ ಮಹರ್ಷಿಯವರು ರಾಜಾಶ್ರಯ ಕವಿಗಳಲ್ಲ, ತಮ್ಮ ಕಾವ್ಯದಿಂದಲೇ ರಾಜಾಧಿರಾಜರಿಗೆ ಆಶ್ರಯದಾತರಾದ ಕವಿಶ್ರೇಷ್ಠರು - ಪ್ರೊ.ಕರಿಗೂಳಿ

ದಂತಕತೆಯಾದ ರಾಮಾಯಣವು ಪ್ರಪಂಚಾದ್ಯಂತ ತನ್ನ ಪ್ರಭಾವ ಬೀರಿದೆ ತನ್ಮೂಲಕ ವಿಶ್ವಕ್ಕೆ ಶ್ರೇಷ್ಠ ಮೌಲ್ಯಗಳು ದೊರೆತಿವೆ ಎಂದರು, ಈ ಬಗ್ಗೆ ಮಾತನಾಡುತ್ತಾ, ರಾಮಾಯಣದ ವಿವಿಧ ಪಾತ್ರಗಳು ಮತ್ತು ಆ ಕಾವ್ಯದ ರಸಾಸ್ವಾದ ಮತ್ತು ಅದನ್ನ ನೀಡಿದ ವಾಲ್ಮೀಕಿಯರನ್ನ ಮಧುರ ಗಾನಕೋಗಿಲೆ ಎಂದು ಸ್ಮರಿಸಿದರು,

ಹಾಗೆಯೇ ನಾಡಿನ ಎಲ್ಲಾ ಮಹಾನಾಯಕರು ಇಡೀ ದೇಶ ಮತ್ತು ನಾಡಿಗೆ ಸ್ವಂತವಾದವರು,ಅವರನ್ನು ಒಂದು ಜಾತಿ ವರ್ಗಕ್ಕೆ ಸೀಮಿತಗೊಳಿಸಬಾರದು, ನಾಯಕರು ನೀಡಿದ ಎಲ್ಲಾ ಕೊಡುಗೆಗಳು ಕಾವ್ಯಗಳು ಎಲ್ಲರಿಗೂ ಸ್ವಂತ ,ಮಹಾನ್ ಕಾವ್ಯದ ಮೌಲ್ಯಗಳ ಪರಿಪಾಲನಾ ಸಂದೇಶ ಈಗಿನ ಸಮಾಜಕ್ಕೆ ತುಂಬಾ ಅವಶ್ಯಕವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಅಧ್ಯಾಪಕರಾದ ರವಿಕುಮಾರ, ಉಪನ್ಯಾಸಕರಾದ, ಡಾ.ದೇವರಾಜ, ಕನಕಪ್ಪ ಆಡಳಿತ ಸಿಬ್ಬಂದಿಯವರಾದ ಜಬೀನಾ ಬೇಗಂ, ವಿನಾಯಕ ಮತ್ತು ಸಹಾಯಕ ಸಿಬ್ಬಂದಿಯಾದ ಚಿನ್ನವರಪ್ರಸಾದ್, ಶಾಂತಿ, ಶರಣಬಸವ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಹಟ್ಟಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಮುಖಂಡರಾದ ಸಿದ್ದಪ್ಪ ಮುಂಡರಗಿ,ಯಾಂಕೋಬ್ ಮಿಯ್ಯಾಪುರ,ಗ್ಯಾನಪ್ಪ, ಹನುಮಂತ ಗೌಡ,ಅಮರೇಶ ಬುದ್ದಿನಿ,ನಾಗರಾಜ ನಾಯಕ,ಗುಂಡಪ್ಪ ಗೌಡ ಮಾಸ್ಟರ್,ಬಾಬು ಸಾಗರ, ಕುಪ್ಪಣ್ಣ,ಯಾಂಕೋಬ್ ಪೂಜಾರಿ,ಬಸವರಾಜ ಗೌಡ, ಅಂಜನೇಯ ಗೌಡ,ದಂಡಪ್ಪ,ಮಡಿವಾಳಪ್ಪ ಗೌಡ, ಜಡಿಯಪ್ಪ ಜಾಲಹಳ್ಳಿ,ರಾಮಣ್ಣ ಬೆಂಕಿ,ರಂಗನಾಥ, ರಂಗಪ್ಪ ಬುದ್ದಿನಿ,ಮಾಲಪ್ಪ ಗಣೆಕಲ್,ಎಂ.ಸಿ. ಚಂದ್ರಶೇಖರ,ರಮೇಶ ಗಣೆಕಲ್,ಮಂಜುನಾಥ ಬೋಗರಮುಂಡಿ,ಮಾಲಪ್ಪ ಹೆಸರೂರು,ಧಣಿ ಬಿ.ಆರ್. ಗುಂಡ,ಕಿಚ್ಚ ರಾಮ,ಬುಜ್ಜ ನಾಯಕ,ಸುರೇಶ ನಾಯಕ, ಸಾಬಣ್ಣ, ರೆಬಲ್,ಚಂದ್ರಕಾಂತ,ಪಂಪಣ್ಣ,ಯಾಂಕೋಬ್ ಚಿಂಚರಕಿ ಸೇರಿದಂತೆ ವಾಲ್ಮೀಕಿ ಸಮಾಜದ ಮುಖಂಡರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳು,ಚಿಂತನೆಗಳು ಮತ್ತು ಜೀವನ ಸಂದೇಶಗಳನ್ನು ಸ್ಮರಿಸುವ ಮೂಲಕ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದಲ್ಲಿ ಕೊಲೆ ಆರೋಪಿ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯ

ಹಮ್ಮಿಕೊಳ್ಳಬೇಕೆಂದು ಪೊಲೀಸ್ ಇಲಾಖೆಯನ್ನು ವಿನಂತಿಸುತ್ತೇನೆ. ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ಗಂಭೀರ ಕಾನೂನು, ಮಾನಸಿಕ ಮತ್ತು ದೈಹಿಕ ಪರಿಣಾಮಗಳ ಬಗ್ಗೆ ಯುವಜನರಿಗೆ ಅರಿವು ಮೂಡಿಸುವುದರಿಂದ, ಅವರ ಭವಿಷ್ಯವನ್ನು ರಕ್ಷಿಸಲು ಮತ್ತು ಅಪರಾಧ ಪ್ರವೃತ್ತಿಗಳನ್ನು ತಡೆಯಲು ಸಹಾಯವಾಗುತ್ತದೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಗತ್ತಿನ ಶ್ರೇಷ್ಠ ಸಾಹಿತ್ಯಗಳಲ್ಲಿ ವಚನ ಸಾಹಿತ್ಯಕ್ಕೆ ಅಗ್ರಸ್ಥಾನ



ಬೀದರ್

ಜಗತ್ತಿನ ಎಲ್ಲ ಶ್ರೇಷ್ಠ ಸಾಹಿತ್ಯಗಳಲ್ಲಿ ವಚನ ಸಾಹಿತ್ಯ ಅತ್ಯಂತ ಶ್ರೇಷ್ಠವಾದುದು. ಎಲ್ಲರನ್ನೂ ಅಪ್ಪಿಕೊಳ್ಳುವ ಉದಾತ್ತ ತತ್ವ ಲಿಂಗಾಯತ ಧರ್ಮದಲ್ಲಿದೆ ಎಂದು ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯರು ತಿಳಿಸಿದರು.

ಬಸವಕಲ್ಯಾಣದ ಸಸ್ತಾಪುರ ಬಂಗ್ಲಾ ಸಮೀಪದ ಎಂ.ಎಂ. ಬೇಗ್ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ 25ನೇ ಸ್ವಾಭಿಮಾನಿ ಕಲ್ಯಾಣ ಪರ್ವದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಆಧುನಿಕ ಯುಗದಲ್ಲೂ ವಚನಗಳ ಪ್ರಸ್ತುತತೆ ಕುಗ್ಗಿಲ್ಲ. ಸಮಾಜದಲ್ಲಿ ಶೋಷಣೆ, ಭ್ರಷ್ಟಾಚಾರ ಹಾಗೂ ಅಸಮಾನತೆ ತಾಂಡವವಾಡುತ್ತಿರುವ ಈ ಸಂದರ್ಭದಲ್ಲಿ ಬಸವಾದಿ ಶರಣರ ನುಡಿದಂತೆ ನಡೆ ಎಂಬ ತತ್ವ ಮತ್ತು ಎಲ್ಲರನ್ನೂ ತನ್ನವರನ್ನಾಗಿ ಕಾಣುವ ಇವನಮ್ಮವ ಇವನಮ್ಮವ ಎಂದೆನಿಸಯ್ಯ ಎಂಬ ಆಶಯ ಪ್ರತಿಯೊಬ್ಬರಿಗೂ ಮಾರ್ಗದರ್ಶಿಯಾಗಿದೆ. ವಚನಗಳ ಅಧ್ಯಯನ ಮಾಡಿ, ಅವುಗಳ ಆಶಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದರು.

12ನೇ ಶತಮಾನದ ಶರಣ ಚಳವಳಿ ಮತ್ತು ವಚನ ಸಾಹಿತ್ಯವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಾತ್ರವಲ್ಲದೆ, ಇಡೀ ವಿಶ್ವದ ವೈಚಾರಿಕ ಇತಿಹಾಸದಲ್ಲೇ ಅದ್ಭುತ ಮೈಲಿಗಲ್ಲಾಗಿದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ವೈಚಾರಿಕ ಹಾಗೂ ಸಾಮಾಜಿಕ ಚಳವಳಿಯು ಸಮಾನತೆ, ಕಾಯಕ ಮತ್ತು ದಾಸೋಹದ ತತ್ವಗಳ ಮೂಲಕ ಹೊಸ ಸಮಾಜದ ನಿರ್ಮಾಣಕ್ಕೆ ಬಲಿಷ್ಠ ಅಡಿಪಾಯ ಹಾಕಿತು ಎಂದು ತಿಳಿಸಿದರು.

ದೇವರು ಈ ಜಗತ್ತಿಗೆ ಬಸವಣ್ಣನವರನ್ನು ನೀಡಿದರು. ಬಸವಣ್ಣನವರು ಅನುಭವ ಮಂಟಪವನ್ನು ನೀಡಿದರು. ಅನುಭವ ಮಂಟಪವು ಶರಣರನ್ನು ನೀಡಿತು. ಶರಣರು ವಚನ ಸಾಹಿತ್ಯವನ್ನು ನೀಡಿದರು. ವಚನ ಸಾಹಿತ್ಯವು ಮಾನವನನ್ನು ಮಹಾದೇವನನ್ನಾಗಿ ಮಾಡಿತು ಎಂದು ಅವರು ಪ್ರತಿಪಾದಿಸಿದರು.

ಪರ್ವದ ಉತ್ಸವ ಸಮಿತಿಯ ಅಧ್ಯಕ್ಷ ಡಾ. ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ, ಇಸ್ಲಾಂ ಬಾಂಧವರು ಪ್ರತಿದಿನ ನವಾಜ್ ಮಾಡುವಂತೆ, ಕ್ರೈಸ್ತರು ವಾರಕ್ಕೊಮ್ಮೆ ಪ್ರಾರ್ಥನೆ ಸಲ್ಲಿಸಿ ಧರ್ಮಪ್ರಚಾರ ಮಾಡುವಂತೆ ಲಿಂಗಾಯತ ಬಾಂಧವರೂ ವಾರಕ್ಕೊಮ್ಮೆ ಪ್ರಾರ್ಥನೆಗಾಗಿ ಸೇರಿ ಬಸವತತ್ವದ ಪ್ರಚಾರ ಮಾಡಬೇಕು ಎಂದರು.

ಬೌದ್ಧ ಧರ್ಮೀಯರು ದೇಶ-ವಿದೇಶಗಳಲ್ಲಿ ಸಂಚರಿಸಿ ಧರ್ಮಪ್ರಚಾರ ಮಾಡುವಂತೆ ಲಿಂಗಾಯತ ಮಠಾಧೀಶರೂ ಮಠಗಳಿಂದ ಹೊರಬಂದು ಬಸವತತ್ವವನ್ನು ವಿಶ್ವದಾದ್ಯಂತ ಪಸರಿಸಬೇಕಾಗಿದೆ. ಮುಂದಿನ ವರ್ಷ ಎಂಟನೇ ಅಂತಾರಾಷ್ಟ್ರೀಯ ಬಸವತತ್ವ ಸಮ್ಮೇಳನವನ್ನು ಸಿಂಗಾಪುರದಲ್ಲಿ ಆಯೋಜಿಸಲಾಗುತ್ತಿದ್ದು, ಬಸವಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಗುಣತೀರ್ಥವಾಡಿಯ ಕಲ್ಯಾಣ ಮಹಾಮನೆಯ ಬಸವಪ್ರಭು ಸ್ವಾಮಿ ಮಾತನಾಡಿ, ಬಸವಣ್ಣನವರ ವ್ಯಕ್ತಿತ್ವಕ್ಕೆ ಮಾರುಹೋಗಿ ಅಂದು ಅಂಗ, ವಂಗ, ಕಳಿಂಗ ಸೇರಿದಂತೆ ವಿದೇಶಗಳಿಂದಲೂ ಶರಣರು ಕಲ್ಯಾಣಕ್ಕೆ ಆಗಮಿಸಿ ಆ ನೆಲವನ್ನು ಪಾವನಗೊಳಿಸಿದರು. ಆದರೆ, ಇಂದು ಕೆಲವು ಮಠಾಧೀಶರಿಂದ ಬಸವತತ್ವವನ್ನು ಕಲುಷಿತಗೊಳಿಸುವ ಹುನ್ನಾರ ನಡೆಯುತ್ತಿದೆ. ಜೈ ಬಸವ ಎನ್ನುವವರ ಮುಂದೆ ಜೈ ಶ್ರೀರಾಮ್ ಎಂದು ಕೂಗುವ ಮೂಲಕ ದ್ವೇಷದ ಭಾವನೆ ಹರಡಲಾಗುತ್ತಿದೆ. ಆದ್ದರಿಂದ ಬಸವಾಭಿಮಾನಿಗಳು ಎಚ್ಚೆತ್ತುಕೊಳ್ಳಬೇಕು ಎಂದು ಹೇಳಿದರು.

ಚಿಕ್ಕಮಗಳೂರಿನ ಡಾ. ಜಯಬಸವಾನಂದ ಸ್ವಾಮೀಜಿ ಮಾತನಾಡಿದರು. ಬೆಳಿಗ್ಗೆ ಸಾಮೂಹಿಕ ಇಷ್ಟಲಿಂಗ ಪೂಜೆ, ಷಟಸ್ಥಲ ಧ್ವಜಾರೋಹಣ, ಶರಣ ವಂದನೆ ಹಾಗೂ ಶರಣರಿಗೆ ಶರಣಾರ್ಥಿ ಕಾರ್ಯಕ್ರಮಗಳು ನಡೆದವು.

ಈ ಸಂದರ್ಭದಲ್ಲಿ ನಿವೃತ್ತ ಕೆಎಎಸ್ ಅಧಿಕಾರಿ ಎಸ್. ದಿವಾಕರ್ ಹೈದರಾಬಾದ್‌ನ ಮಧು ಇಟಕ್ಯಾಳ್, ಭೀಮರಾವ್ ಬಿರಾದಾರ್ ಬಸವರಾಜ್ ಸಂಗಮದ, ಗಣಪತಿ ಬಿರಾದಾರ್ ಶಿವಶರಣಪ್ಪ ಪಾಟೀಲ್, ಶಿವರಾಜ್ ಪಾಟೀಲ್ ಅತಿವಾಳ್, ಮಲ್ಲಿಕಾರ್ಜುನ್ ಶಾಪುರ್ ವಿಶ್ವನಾಥ್ ಪಾಟೀಲ್ ಗೋಂದೆಗಾಂವ್, ಮಲ್ಲಿಕಾರ್ಜುನ್ ಬುಕ್ಕಾ, ಸತೀಶ್ ಪಾಟೀಲ್ ಹಾರೂರಗೇರಿ, ಶ್ರೀದೇವಿ ಪಾಟೀಲ್, ಸತೀಶ್ ಬೋರಬಂಡ ಹಾಗೂ ಸಿದ್ರಾಮಪ್ಪ ರಾಯಚೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಡಾ.ಶಿವಾನಂದ ಬಂಟನೂರು ಅವರಿಗೆ ಡಾ.ಪ್ರತಿಭಾ ಚಿಣ್ಣಪ್ಪ ಸ್ಮರಣಾರ್ಥ ಪ್ರಶಸ್ತಿ



ಕಲಬುರಗಿ,

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಸಂಗೀತ ಮತ್ತು ಲಲಿತ ಕಲಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಶಿವಾನಂದ ಬಂಟನೂರು ಅವರಿಗೆ ಕಲಾ ಇತಿಹಾಸ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಕರ್ನಾಟಕ ಇತಿಹಾಸ ಅಕಾಡೆಮಿಯ ವತಿಯಿಂದ ಡಾ. ಪ್ರತಿಭಾ ಚಿಣ್ಣಪ್ಪ ಸ್ಮರಣಾರ್ಥ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಡಾ. ಶಿವಾನಂದ ಬಂಟನೂರು ಅವರ ಸಾಧನೆಗೆ ಸಂತಸ ವ್ಯಕ್ತಪಡಿಸಿರುವ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹಾಗೂ ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಈ ಗೌರವ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿಯಾಗಿದ್ದು, ಅವರ ಸಾಧನೆ ಇತರರಿಗೆ ಪ್ರೇರಣೆಯಾಗಲಿದೆ ಎಂದು ತಿಳಿಸಿದ್ದಾರೆ.

ಪ್ರಶಸ್ತಿ ಸ್ವೀಕರಿಸಿದ ಡಾ. ಶಿವಾನಂದ ಬಂಟನೂರು ಅವರು, ಈ ಗೌರವ ದೊರೆಯುವಲ್ಲಿ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರು, ವಿವಿಧ ವಿಭಾಗಗಳ ಡೀನ್‌ಗಳು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೀಡಿದ ಸಹಕಾರ ಮತ್ತು ಪ್ರೋತ್ಸಾಹಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ. ಅಲ್ಲದೆ, ವಿದ್ವತ್‌ಲೋಕದ ವಿದ್ವಾಂಸರು ಹಾಗೂ ಇತಿಹಾಸಾಸಕ್ತರು ನೀಡಿದ ಬೆಂಬಲ ಮತ್ತು ಪ್ರೋತ್ಸಾಹಕ್ಕೆ ಸದಾ ಋಣಿಯಾಗಿರುವುದಾಗಿ ತಿಳಿಸಿದ್ದಾರೆ.

ಕರ್ನಾಟಕ ಇತಿಹಾಸ ಅಕಾಡೆಮಿಯ 40ನೇ ವಾರ್ಷಿಕ ರಾಷ್ಟ್ರೀಯ ಸಮ್ಮೇಳನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ಇತ್ತೀಚೆಗೆ ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲದ ಅನುಭವ ಮಂಟಪದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಡಾ. ಶಿವಾನಂದ ಬಂಟನೂರು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾರಂಭದಲ್ಲಿ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವ ಈಶ್ವರ ಖಂಡ್ರೆ, ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷ ಡಾ. ದೇವರಕೊಂಡಾರೆಡ್ಡಿ, ಬಸವಕಲ್ಯಾಣದ ಅನುಭವ ಮಂಟಪ ಟ್ರಸ್ಟ್‌ನ ಅಧ್ಯಕ್ಷ ಹಾಗೂ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದೇವರು, ಸಮ್ಮೇಳನದ ಸರ್ವಾಧ್ಯಕ್ಷ ಡಾ. ಕೆ. ರವೀಂದ್ರನಾಥ್ ಹಾಗೂ ಹಂಪಿ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮ ಶಿವಮೂರ್ತಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



ಹೊರಗುತ್ತಿಗೆ ಕಾರ್ಮಿಕರಿಗೆ ಪರಿಷ್ಕೃತ ಕನಿಷ್ಠ ವೇತನ ಜಾರಿಗೊಳಿಸಲು ಆಗ್ರಹ

ವಾಡಿ:

ಕಲಬುರಗಿ ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ಮೇ 22ರಂದು ಹೊರಡಿಸಿರುವ ಪರಿಷ್ಕೃತ ಕನಿಷ್ಠ ವೇತನದ ಆದೇಶದಂತೆ ವೇತನ ನೀಡಬೇಕು ಎಂದು ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ ಆಗ್ರಹಿಸಿದೆ.

ವಾಡಿ ಪಟ್ಟಣದ ಹಾಸ್ಟೆಲ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕಾರ್ಮಿಕರು ಪರಿಷ್ಕೃತ ಕನಿಷ್ಠ ವೇತನವನ್ನು ಕೂಡಲೇ ಜಾರಿಗೊಳಿಸುವಂತೆ ಹಾಗೂ ಬಾಕಿ ಇರುವ ವೇತನದ ವ್ಯತ್ಯಾಸದ ಮೊತ್ತವನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಪತ್ರ ಚಳವಳಿ ಹಮ್ಮಿಕೊಂಡರು.

ಕನಿಷ್ಠ ವೇತನ ಜಾರಿಗಾಗಿ ಕಾರ್ಮಿಕರು ಹೋರಾಟ ನಡೆಸಿದ ಪರಿಣಾಮವಾಗಿ ಕಾರ್ಮಿಕ ಇಲಾಖೆ ಪರಿಷ್ಕೃತ ವೇತನದ ಆದೇಶ ಹೊರಡಿಸಿದೆ. ಆದರೆ, ಸರ್ಕಾರ ಮತ್ತು ಆರ್ಥಿಕ ಇಲಾಖೆಯು ಗುತ್ತಿಗೆದಾರರ ಒತ್ತಡಕ್ಕೆ ಮಣಿದು ಆದೇಶವನ್ನು ಜಾರಿಗೊಳಿಸಲು ವಿಳಂಬ ಮಾಡುತ್ತಿವೆ ಎಂದು ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದರು.

ಆದೇಶ ಹೊರಡಿಸಿದ್ದರೂ ಅದರ ಪ್ರಯೋಜನ ಕಾರ್ಮಿಕರಿಗೆ ತಲುಪದಿರುವುದು ವಿಷಾದನೀಯ. ದಿನನಿತ್ಯ ದುಡಿದು ಜೀವನ ಸಾಗಿಸುವ ಹೊರಗುತ್ತಿಗೆ ಕಾರ್ಮಿಕರಿಗೆ ನ್ಯಾಯಯುತ ವೇತನ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಆದ್ದರಿಂದ ಯಾವುದೇ ವಿಳಂಬವಿಲ್ಲದೆ ಪರಿಷ್ಕೃತ ಕನಿಷ್ಠ ವೇತನವನ್ನು ಜಾರಿಗೊಳಿಸಿ, ಕಾರ್ಮಿಕರಿಗೆ ಸಿಗಬೇಕಾದ ವೇತನದ ವ್ಯತ್ಯಾಸದ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಪತ್ರ ಚಳವಳಿಯ ಮೂಲಕ ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ಕಲಬುರಗಿ ಜಿಲ್ಲಾ ಕಾರ್ಯದರ್ಶಿ ಶರಣು ಹೇರೂರ್ ತಾಲೂಕು ಜಂಟಿ ಕಾರ್ಯದರ್ಶಿ ರಾಜು ಒಡೆಯರ್ ಈಶಮ್ಮ ನಾಲ್ವಾರ್ ಚಂದ್ರು ಧನ್ನೆಕರ್ ವಿದ್ಯಾವತಿ ಬಡಿಗೇರ್ ಸಿದ್ದಮ್ಮ ಕಾಶಿ, ಯಲ್ಲಮ್ಮ ನಾಲ್ವಾರ್ ಬನಮ್ಮ ದೇವದುರ್ಗ, ಭೀಮಷಪ್ಪ ದಂಡೋತಿ ಹಾಗೂ ರುಕ್ಕಮ್ಮ ರಾವುರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಟ್ಟಣ ಗ್ರಾಮದಲ್ಲಿ ಬೃಹತ್ ರೈತ ಸಭೆ: 20 ರೈತರಿಗೆ ಸ್ಪ್ರೇಯರ್ ವಿತರಣೆ



ಕಲಬುರಗಿ:

ರೈತರಲ್ಲಿ ಆಧುನಿಕ ಕೃಷಿ ಪದ್ಧತಿಗಳ ಕುರಿತು ಅರಿವು ಮೂಡಿಸುವುದು, ಕೃಷಿ ಉತ್ಪಾದಕತೆ ಹೆಚ್ಚಿಸುವುದು ಹಾಗೂ ಗ್ರಾಮೀಣ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕೊರೊಮಂಡಲ್ ಇಂಟರ್‌ನ್ಯಾಷನಲ್ ಲಿಮಿಟೆಡ್ ವತಿಯಿಂದ ಹಮ್ಮಿಕೊಂಡಿರುವ ಗ್ರೋಮೋರ್ ಗ್ರಾಮ-ಮಾದರಿ ಗ್ರಾಮ ಯೋಜನೆಯಡಿ ಪಟ್ಟಣ ಗ್ರಾಮದಲ್ಲಿ ಬೃಹತ್ ರೈತ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ಸುಮಾರು 250 ರೈತರು ಭಾಗವಹಿಸಿದ್ದರು. ಸಭೆಯಲ್ಲಿ ರೈತರು, ರೈತ ಮುಖಂಡರು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಕೊರೊಮಂಡಲ್ ಕಂಪನಿಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ರೈತ ಸಂಪರ್ಕ ಕೇಂದ್ರದ (ಆರ್‌ಎಸ್‌ಕೆ) ಅಧಿಕಾರಿಗಳು, ಸಹಾಯಕ ಕೃಷಿ ಅಧಿಕಾರಿ ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಉಪಸ್ಥಿತರಿದ್ದು, ಕೃಷಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕೊರೊಮಂಡಲ್ ಕಂಪನಿಯ ವಲಯ ವ್ಯವಸ್ಥಾಪಕ ಅಮರನಾಥ ರೆಡ್ಡಿ, ಕಂಪನಿಯ ಇತಿಹಾಸ, ಕಳೆದ 60 ವರ್ಷಗಳಿಂದ ರೈತರಿಗೆ ನೀಡುತ್ತಿರುವ ಸೇವೆಗಳು ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಲಿರುವ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ಹಿರಿಯ ಕೃಷಿ ತಜ್ಞ ಪ್ರಶಾಂತ ಅವರು ಗ್ರೋಮೋರ್ ಗ್ರಾಮ ಮಾದರಿ ಗ್ರಾಮ ಯೋಜನೆಯ ಉದ್ದೇಶ, ಕಳೆದ ಒಂದು ವರ್ಷದಲ್ಲಿ ಕೈಗೊಂಡ ಚಟುವಟಿಕೆಗಳು, ಸಾಧಿಸಿದ ಪ್ರಗತಿ ಹಾಗೂ ಮುಂದಿನ ದಿನಗಳಲ್ಲಿ ಅನುಷ್ಠಾನಗೊಳಿಸಲಿರುವ ಅಭಿವೃದ್ಧಿ ಕಾರ್ಯಗಳ ಕುರಿತು ವಿವರಿಸಿದರು. ರೈತರ ಕೃಷಿ ಕೌಶಲ ವೃದ್ಧಿ, ವೈಜ್ಞಾನಿಕ ಕೃಷಿ ಪದ್ಧತಿಗಳ ಅಳವಡಿಕೆ ಹಾಗೂ ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಗೆ ಈ ಯೋಜನೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸ್ಥಳೀಯ ರೈತ ಮುಖಂಡ ಬಸವರಾಜ ಜೇವಣಗಿ ಮಾತನಾಡಿ, ರೈತರು ಕೃಷಿ ತಜ್ಞರಿಂದ ಸೂಕ್ತ ತಾಂತ್ರಿಕ ಮಾಹಿತಿ ಪಡೆದು ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ವೈಜ್ಞಾನಿಕ ವಿಧಾನಗಳನ್ನು ಅನುಸರಿಸುವ ಮೂಲಕ ಮಣ್ಣಿನ ಫಲವತ್ತತೆಯನ್ನು ಕಾಪಾಡುವುದರ ಜೊತೆಗೆ ಬೆಳೆಗಳ ಇಳುವರಿಯನ್ನೂ ಹೆಚ್ಚಿಸಿಕೊಳ್ಳಬಹುದು ಎಂದು ಹೇಳಿದರು.

ರೈತರ ಕೃಷಿ ಚಟುವಟಿಕೆಗಳಿಗೆ ನೆರವಾಗುವ ಉದ್ದೇಶದಿಂದ ಸಭೆಯ ಬಳಿಕ 20 ರೈತರಿಗೆ ಸ್ಪ್ರೇಯರ್‌ಗಳನ್ನು ವಿತರಿಸಲಾಯಿತು. ಇದರಿಂದ ಕೃಷಿ ಕಾರ್ಯಗಳನ್ನು ಸುಲಭಗೊಳಿಸಲು ಹಾಗೂ ರೈತರಿಗೆ ಅಗತ್ಯ ಉಪಕರಣಗಳ ಬಳಕೆಗೆ ಉತ್ತೇಜನ ನೀಡಲು ಸಹಕಾರಿಯಾಗಲಿದೆ.

ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ ಆರ್) ಚಟುವಟಿಕೆಗಳ ಭಾಗವಾಗಿ ಗ್ರಾಮದ ಸಾರ್ವಜನಿಕ ಸ್ಥಳಗಳಲ್ಲಿ ಈಗಾಗಲೇ 10 ಸೋಲಾರ್ ಬೀದಿ ದೀಪಗಳನ್ನು ಅಳವಡಿಸಲಾಗಿದೆ. ಈ ಕ್ರಮವು ಗ್ರಾಮದಲ್ಲಿ ರಾತ್ರಿ ವೇಳೆ ಬೆಳಕಿನ ವ್ಯವಸ್ಥೆಯನ್ನು ಸುಧಾರಿಸುವುದರ ಜೊತೆಗೆ ಸೌರಶಕ್ತಿಯ ಬಳಕೆಯನ್ನು ಉತ್ತೇಜಿಸಲು ನೆರವಾಗಲಿದೆ.

ಗ್ರೋಮೋರ್ ಗ್ರಾಮ- ಸಮೃದ್ಧ ರೈತ, ಸಂಪನ್ನ ಗ್ರಾಮ ಎಂಬ ಧ್ಯೇಯದಡಿ ಕೈಗೊಂಡಿ ರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ರೈತರು ಸಂತಸ ವ್ಯಕ್ತಪಡಿಸಿದರು. ರೈತರಿಗೆ ಅಗತ್ಯ ಕೃಷಿ ಉಪಕರಣಗಳ ವಿತರಣೆ, ತಾಂತ್ರಿಕ ಮಾರ್ಗದರ್ಶನ ಹಾಗೂ ಗ್ರಾಮದಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಕೃಷಿ ಮತ್ತು ಗ್ರಾಮೀಣ ಬದುಕಿನ ಸುಧಾರಣೆಗೆ ಪೂರಕವಾಗಿವೆ ಎಂದು ಅಭಿಪ್ರಾಯಪಟ್ಟರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಹಣೆಪಟ್ಟಿ- ರಾಹುಲ್ ವಿರುದ್ಧ ಪುನಃ ಪ್ರಾಪಗ್ಯಾಂಡ ಸಮರ!

ಆರಂಭದಲ್ಲಿ ಪಪ್ಪು ಎಂದು ರಾಹುಲ್ ಅವರನ್ನು ಹೀಯಾಳಿಸಲಾಯಿತು. ಈಗ ಎಂದು ವ್ಯಂಗ್ಯವಾಡಲಾಗುತ್ತಿದೆ. ಅಪಹಾಸ್ಯದ ಪದಗಳು ಬದಲಾಗಿವೆ. ಆದರೆ ರಾಜಕೀಯ ಉದ್ದೇಶ ಬದಲಾಗಿಲ್ಲ. ರಾಹುಲ್ ಗಾಂಧಿ ಗಂಭೀರವಾಗಿ ಪರಿಗಣಿಸಬೇಕಾದ ನಾಯಕನಲ್ಲ ಎಂಬ ಪ್ರಾಪಗ್ಯಾಂಡವನ್ನು ಕಟ್ಟಿ ನಿಲ್ಲಿಸಿ, ಅದೇ ದಿಕ್ಕಿನಲ್ಲಿ ಜನಾಭಿಪ್ರಾಯ ಮೂಡಿಸುವುದೇ ಈ ಪ್ರಚಾರದ ಗುರಿ.



ಪಪ್ಪು ಎಂಬ ಅದೇ ಹಳೆಯ ಅಪಹಾಸ್ಯವನ್ನು ಈಗ ಎಂದು ಹೊಸದಾಗಿ ಪ್ಯಾಕೇಜ್ ಮಾಡಲಾಗುತ್ತಿದೆ.

ಭಾರತ್ ಜೋಡೋ ಯಾತ್ರೆಯು ಪ್ರತಿಪಕ್ಷ ನಾಯಕ ರಾಹುಲ್ ಗಾಂಧೀ ವ್ಯಕ್ತಿತ್ವಕ್ಕೆ ಹೊಸ ಆಯಾಮ ನೀಡಿದೆ. ಮೋದಿಯವರಿಗೆ ಸರಳಬಹುಮತದ ಜನಾದೇಶ ಕೂಡ ದಕ್ಕದಿರುವ 2024ರ ಲೋಕಸಭಾ ಚುನಾವಣೆ ಹೊಸ ರಾಜಕೀಯ ಸಂದೇಶ ನೀಡಿತ್ತು. ರಾಹುಲ್ ರಾಜಕೀಯ ವರ್ಚಸ್ಸು ಇತ್ತೀಚಿನ ವರ್ಷಗಳಲ್ಲಿ ಹಿಗ್ಗಿದೆಯೇ ವಿನಾ ಕುಗ್ಗಿಲ್ಲ.

ಈ ವಿದ್ಯಮಾನ ಮೋದಿ ಮತ್ತು ಸಂಘಪರಿವಾರವನ್ನು ಹೆಚ್ಚು ಹೆಚ್ಚು ಅಭದ್ರ ಭಾವನೆಗೆ ನೂಕಿರುವುದು ನಿಚ್ಚಳ. ಹೀಗಾಗಿಯೇ ರಾಹುಲ್ ವಿರುದ್ಧ ಹಳೆಯ ದಾಳಿಗೆ ಮರುಜೀವ ನೀಡಲು ಮುಂದಾಗಿದ್ದಾರೆ. ರಾಹುಲ್ ಅವರನ್ನು ಅಸಮರ್ಥ ನಾಯಕನಂತೆ ಬಿಂಬಿಸುವ ಪ್ರಯತ್ನಕ್ಕೆ ಹನ್ನೆರಡು ವರ್ಷಗಳೇ ಉರುಳಿವೆ.

ಹನ್ನೆರಡು ವರ್ಷಗಳ ಕಾಲ ನಿರಂತರ ಅಪಪ್ರಚಾರದ ಅಲೆಗಳ ಅಬ್ಬರದ ಮುಂದೆ ಆಳಕ್ಕೆ ಕಾಲು ಊರಿ ನಿಂತ ಕಾಂಗ್ರೆಸ್ ನಾಯಕ ರಾಹುಲ್. ಮತ್ತೊಬ್ಬರಾಗಿದ್ದರೆ ಈ ಹೊಡೆತ ತಾಳಲಾರದೆ ಬೆನ್ನು ತಿರುಗಿಸುವ ಸಾಧ್ಯತೆ ಇತ್ತು.

ಎದುರಾಳಿಯನ್ನು ಸೋಲಿಸಲು ವ್ಯಕ್ತಿಯ ಚಾರಿತ್ರ್ಯಹರಣ ಅಥವಾ ವ್ಯಕ್ತಿತ್ವ ಹನನವು ಬಿಜೆಪಿ ಬಳಸುತ್ತ ಬಂದಿರುವ ಅತಿ ದೊಡ್ಡ ಅಸ್ತ್ರ. ಎದುರಾಳಿಯ ವಿಚಾರಗಳನ್ನು ಚರ್ಚಿಸುವ ಬದಲು ಆತನ ವ್ಯಕ್ತಿತ್ವವನ್ನು ಅಪಹಾಸ್ಯಕ್ಕೆ ಈಡು ಮಾಡಿ ಚಾರಿತ್ರ್ಯಕ್ಕೆ ಮಸಿ ಬಳಿಯಲಾಗುತ್ತಿದೆ.

ಆರಂಭದಲ್ಲಿ ಪಪ್ಪು ಎಂದು ರಾಹುಲ್ ಅವರನ್ನು ಹೀಯಾಳಿಸಲಾಯಿತು. ಈಗ ಎಂದು ವ್ಯಂಗ್ಯವಾಡಲಾಗುತ್ತಿದೆ. ಅಪಹಾಸ್ಯದ ಪದಗಳು ಬದಲಾಗಿವೆ. ಆದರೆ ರಾಜಕೀಯ ಉದ್ದೇಶ ಬದಲಾಗಿಲ್ಲ. ರಾಹುಲ್ ಗಾಂಧಿ ಗಂಭೀರವಾಗಿ ಪರಿಗಣಿಸಬೇಕಾದ ನಾಯಕನಲ್ಲ ಎಂಬ ಪ್ರಾಪಗ್ಯಾಂಡವನ್ನು ಕಟ್ಟಿ ನಿಲ್ಲಿಸಿ, ಅದೇ ದಿಕ್ಕಿನಲ್ಲಿ ಜನಾಭಿಪ್ರಾಯ ಮೂಡಿಸುವುದೇ ಈ ಪ್ರಚಾರದ ಗುರಿ.

2014ರ ಲೋಕಸಭಾ ಚುನಾವಣೆಯ ಹೊತ್ತಿಗೆ ರಾಹುಲ್ ಗಾಂಧಿ ವಿರುದ್ಧದ ಅಪಹಾಸ್ಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ತೀವ್ರಗೊಳಿಸಲಾಗಿತ್ತು. ಅವರ ಭಾಷಣಗಳ ಕತ್ತರಿಸಿ ತಿರುಚಿ ಎಡವಟ್ಟುಗಳನ್ನು ಸೃಷ್ಟಿಸಿ ಅವುಗಳನ್ನು ಹರಿಬಿಡಲಾಯಿತು. ಸಂದರ್ಶನಗಳ ಸಣ್ಣ ತುಣುಕುಗಳನ್ನು ವೈರಲ್ ಮಾಡಲಾಯಿತು. ಅವರನ್ನು ಅಸಮರ್ಥ ನಾಯಕನಂತೆ ಚಿತ್ರಿಸಲಾಯಿತು.

ಈ ಪ್ರಚಾರದ ಬೆಂಕಿಗೆ ಬಿಜೆಪಿ ಮತ್ತು ಸಂಘ ಪರಿವಾರ ಎಣ್ಣೆ ಎರೆದವು. ಕೇಸರಿ ಸಾಮಾಜಿಕ ಜಾಲತಾಣ ಖಾತೆಗಳೂ ಸಕ್ರಿಯವಾಗಿದ್ದವು. ಆಳುವವರ ಮಡಿಲಲ್ಲಿ ಆಡುವ ಗೋದಿ ಮೀಡಿಯಾ ಎಂದು ಕುಖ್ಯಾತವಾಗಿರುವ ಮುಖ್ಯವಾಹಿನಿಯ ಮಾಧ್ಯಮಗಳ ಒಂದು ದೊಡ್ಡ ವರ್ಗವೂ ಈ ವಿಕೃತ ಚಿತ್ರಣಕ್ಕೆ ಶಕ್ತಿ ತುಂಬಿತು.

ರಾಹುಲ್ ಅವರ ವ್ಯಕ್ತಿತ್ವ ಹನನದ ಈ ಪ್ರಚಾರ ಸಮರಕ್ಕೆ ಸಾವಿರಾರು ಕೋಟಿ ರೂಪಾಯಿ ಸುರಿಯಲಾಗಿದೆ. ಈ ಮೊತ್ತವನ್ನು ದೇಶದ ಬಲಿಷ್ಠ ಕಾರ್ಪೊರೇಟ್ ಸಂಸ್ಥೆಗಳು ಭರಿಸಿವೆ ಎಂಬ ಆರೋಪಗಳಿವೆ.

ಒಬ್ಬ ನಾಯಕನ ಮಾತನ್ನು ಜನತೆ ಆಲಿಸುವ ಮೊದಲೇ ಆತನ ಬಗ್ಗೆ ಪಕ್ಷಪಾತದ ವಿಕೃತ ತೀರ್ಪು ನೀಡುವ ವಾತಾವರಣವನ್ನು ನಿರ್ಮಿಸಲಾಯಿತು. ರಾಹುಲ್ ಗಾಂಧಿ ಏನು ಹೇಳುತ್ತಾರೆ ಎಂಬುದಕ್ಕಿಂತ ಅವರು ಹೇಗೆ ಮಾತನಾಡುತ್ತಾರೆ ಎಂಬ ಸುಳ್ಳುಗಳ ಕಥಾನಕಗಳನ್ನು ಹೆಣೆದು ಪ್ರಚಾರ ಮಾಡಲಾಯಿತು.

ರಾಹುಲ್ ಎತ್ತಿದ ರಾಜಕೀಯ ಪ್ರಶ್ನೆಗಳು ಹಿನ್ನೆಲೆಗೆ ಸರಿದವು. ವೈಯಕ್ತಿಕ ಅಪಹಾಸ್ಯವನ್ನು ಮುನ್ನೆಲೆಗೆ ತಂದು ನಿಲ್ಲಿಸಲಾಯಿತು..

2022ರಲ್ಲಿ ಆರಂಭವಾದ ಭಾರತ್ ಜೋಡೋ ಯಾತ್ರೆ ಈ ಅಪಪ್ರಚಾರಕ್ಕೆ ಸವಾಲೆಸೆಯಿತು.

ರಾಹುಲ್ ಗಾಂಧಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆದರು. ಸಾವಿರಾರು ಜನರನ್ನು ಭೇಟಿಯಾದರು. ರೈತರ ಸಂಕಷ್ಟ ಆಲಿಸಿದರು. ಕಾರ್ಮಿಕರೊಂದಿಗೆ ಮಾತನಾಡಿದರು. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಕೇಳಿದರು. ಮಹಿಳೆಯರು ಮತ್ತು ಯುವಜನರೊಂದಿಗೆ ಸಂವಾದ ನಡೆಸಿದರು.

ಇದುವರೆಗೆ ಮಾಧ್ಯಮಗಳಲ್ಲಿ ಕಾಣುತ್ತಿದ್ದ ರಾಹುಲ್ ಗಾಂಧಿಗೂ ಜನರ ನಡುವೆ ಕಾಣಿಸಿಕೊಂಡ ರಾಹುಲ್ ಗಾಂಧಿಗೂ ಅಪಾರ ವ್ಯತ್ಯಾಸವಿತ್ತು. ಅವರ ರಾಜಕೀಯ ವ್ಯಕ್ತಿತ್ವದ ಬಗ್ಗೆ ಹೊಸ ಚರ್ಚೆ ಆರಂಭವಾಯಿತು. ಅವರ ತಾಳ್ಮೆ, ಸಂವಾದ ಶೈಲಿ ಮತ್ತು ಜನಸಂಪರ್ಕದ ಸಾಮರ್ಥ್ಯ ಗಮನ ಸೆಳೆದವು.

ಅವರನ್ನು ಅರೆಕಾಲಿಕ ರಾಜಕಾರಣಿ ಎಂದು ಟೀಕಿಸುತ್ತಿದ್ದವರಿಗೆ ಭಾರತ್ ಜೋಡೋ ಯಾತ್ರೆ ಹೊಸ ಸವಾಲಾಯಿತು. ಪಪ್ಪು ಎಂಬ ಹಣೆಪಟ್ಟಿ ಕರಗಿ ಕಳಚಿಕೊಳ್ಳುವ ಪ್ರಕ್ರಿಯೆ ಶುರುವಾಯಿತು.

2024ರ ಲೋಕಸಭಾ ಚುನಾವಣೆ ಈ ಬದಲಾವಣೆಗೆ ಮತ್ತಷ್ಟು ಇಂಬು ನೀಡಿತು. 2019ರಲ್ಲಿ 303 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ 2024ರಲ್ಲಿ 240 ಸ್ಥಾನಗಳಿಗೆ ಕುಸಿಯಿತು. ಸ್ವಂತ ಶಕ್ತಿಯ ಮೇರೆಗೆ ಸರಳ ಬಹುಮತ ಪಡೆಯಲೂ ವಿಫಲವಾಯಿತು. ಮತ್ತೊಂದೆಡೆ ಕಾಂಗ್ರೆಸ್ 52 ಸ್ಥಾನಗಳಿಂದ 99 ಸ್ಥಾನಗಳಿಗೆ ಏರಿತು. ರಾಹುಲ್ ಗಾಂಧಿ ರಾಜಕೀಯವಾಗಿ ಮುಗಿದುಹೋದ ನಾಯಕ ಎಂಬ ಪ್ರಚಾರಕ್ಕೆ ಚುನಾವಣಾ ಫಲಿತಾಂಶ ಸವಾಲೆಸೆದಿತ್ತು.

ರಾಹುಲ್ ಗಾಂಧಿ ಲೋಕಸಭೆಯಲ್ಲಿ ಪ್ರತಿ ಪಕ್ಷದ ನಾಯಕರಾದರು. ಸರ್ಕಾರವನ್ನು ಪ್ರಶ್ನಿಸುವ ಸಾಂವಿಧಾನಿಕ ಜವಾಬ್ದಾರಿಯನ್ನು ಅವರು ಸ್ವಯಂಪ್ರೇರಿತರಾಗಿ ಎತ್ತಿಕೊಂಡರು.

ಪಪ್ಪು ಎಂಬ ಹಳೆಯ ಹಣೆಪಟ್ಟಿಗೆ ಬದಲಾಗಿ ಎಂಬ ವ್ಯಂಗ್ಯ ಮುನ್ನೆಲೆಗೆ ಬಂದಿದೆ. ಇದರ ರಾಜಕೀಯ ಉದ್ದೇಶವೇನು? ರಾಹುಲ್ ಗಾಂಧಿಯವರ ವಿಶ್ವಾಸಾರ್ಹತೆಯನ್ನು ಮತ್ತೊಮ್ಮೆ ಪ್ರಶ್ನಿಸುವುದೇ? ಅವರ ಬದಲಾಗುತ್ತಿರುವ ಸಾರ್ವಜನಿಕ ಚಿತ್ರಣವನ್ನು ದುರ್ಬಲಗೊಳಿಸುವುದೇ?

ದೇಶದ ಸಾಮಾಜಿಕ- ರಾಜಕೀಯ- ಆರ್ಥಿಕ ಸ್ಥಿತಿಗತಿಗಳ ಕುರಿತ ಹಲವು ಮಹತ್ವದ ವಿಷಯಗಳನ್ನು ಪ್ರಸ್ತಾಪಿಸತೊಡಗಿದ್ದಾರೆ. ನಿರುದ್ಯೋಗದ ಬಗ್ಗೆ ಮಾತನಾಡುತ್ತಿದ್ದಾರೆ. ಆರ್ಥಿಕ ಅಸಮಾನತೆಯನ್ನು ಪ್ರಶ್ನಿಸುತ್ತಿದ್ದಾರೆ. ಜಾತಿಗಣತಿಗೆ ಒತ್ತಾಯಿಸುತ್ತಿದ್ದಾರೆ. ಸಾಮಾಜಿಕ ನ್ಯಾಯದ ಪರ ಧ್ವನಿ ಎತ್ತುತ್ತಿದ್ದಾರೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯನ್ನು ಪ್ರಮುಖ ರಾಜಕೀಯ ವಿಷಯಗಳನ್ನಾಗಿ ಮಾಡಿದ್ದಾರೆ. ಇವು ದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದ ಪ್ರಶ್ನೆಗಳೇ ವಿನಾ ವ್ಯಕ್ತಿಗತ ಅಲ್ಲ.

ಇಂತಹ ಮೂಲಭೂತ ಪ್ರಶ್ನೆಗಳಿಗೆ ಉತ್ತರ ನೀಡುವುದು ಆಡಳಿತ ಪಕ್ಷದ ಗುರುತರ ಜವಾಬ್ದಾರಿ. ಮೋದಿಯವರ ಬಳಿ ಉತ್ತರಗಳಿಲ್ಲ. ವ್ಯಕ್ತಿತ್ವವನ್ನು ಅಪಹಾಸ್ಯ ಮಾಡುವುದು ಸುಲಭ. ಹೀಗಾಗಿ ಸುಲಭದ ದಾರಿ ಹಿಡಿಯಲಾಗಿದೆ.

ರಾಹುಲ್ ಗಾಂಧಿಯವರ ರಾಜಕೀಯ ಚಟುವಟಿಕೆ ಹೆಚ್ಚಾಗಿದೆ. ಸಾರ್ವಜನಿಕ ಚರ್ಚೆಗಳಲ್ಲಿ ಅವರ ಪ್ರಸ್ತುತಿಯೂ ಬದಲಾಗಿದೆ. ವಿರೋಧ ಪಕ್ಷದ ನಾಯಕರಾಗಿ ಅವರು ಸರ್ಕಾರವನ್ನು ನಿರಂತರವಾಗಿ ಪ್ರಶ್ನಿಸುತ್ತಿದ್ದಾರೆ. ಇದು ಬಿಜೆಪಿಗೆ ರಾಜಕೀಯ ಸವಾಲು ಎಂಬುದರಲ್ಲಿ ಅನುಮಾನವಿಲ್ಲ.

ರಾಹುಲ್ ಗಾಂಧಿಯವರ ವಿಚಾರಗಳನ್ನು ಎದುರಿಸುವ ಬದಲು ಅವರ ವ್ಯಕ್ತಿತ್ವವನ್ನೇ ಗುರಿಯಾಗಿಸುವ ಪ್ರಯತ್ನ ಏಕೆ ಮುಂದುವರಿದಿದೆ ಎಂಬ ಪ್ರಶ್ನೆಗೆ ಬಿಜೆಪಿ ಉತ್ತರ ನೀಡಬೇಕಿದೆ.

ರಾಹುಲ್ ಗಾಂಧಿಯವರ ಸಾರ್ವಜನಿಕ ಚಿತ್ರಣ ಬದಲಾಗಿದೆ. ಆದರೆ ರಾಜಕೀಯ ಯಶಸ್ಸಿನ ಖಾತರಿ ಇನ್ನೂ ಇಲ್ಲ.

ಕಾಂಗ್ರೆಸ್ ಈಗಲೂ ಹಲವು ರಾಜ್ಯಗಳಲ್ಲಿ ದುರ್ಬಲವಾಗಿದೆ. ಪಕ್ಷದ ಸಂಘಟನೆ ಬಲಗೊಳ್ಳಬೇಕಿದೆ. ಚುನಾವಣಾ ತಂತ್ರಗಾರಿಕೆ ದಷ್ಟಪುಷ್ಟ ಆಗಬೇಕಿದೆ. ಜನರ ವಿಶ್ವಾಸವನ್ನು ಮತಗಳಾಗಿ ಪರಿವರ್ತಿಸುವುದು ರಾಹುಲ್ ಕಾಂಗ್ರೆಸ್ಸಿನ ಮುಂದಿರುವ ಸವಾಲು. ಜನಪ್ರಿಯತೆಯೊಂದೇ ಸಾಲದು. ಪರ್ಯಾಯ ಆಡಳಿತದ ಸ್ಪಷ್ಟ ಕಾರ್ಯಕ್ರಮ ನೀತಿ ನಿರೂಪಣೆಗಳೂ ಬೇಕು.

ರಾಜಕೀಯ ಟೀಕೆ ಟಿಪ್ಪಣಿಗಳು ಜನತಂತ್ರದ ಜೀವಾಳ. ಸರ್ಕಾರದ ನಿರ್ಧಾರಗಳನ್ನು ಪ್ರಶ್ನಿಸಬೇಕು. ವೈಫಲ್ಯಗಳನ್ನು ಚರ್ಚಿಸಬೇಕು. ಕೊಚ್ಚಿಕೊಳ್ಳುವ ಸಾಧನೆಗಳನ್ನು ವಿಮರ್ಶೆಯ ಒರೆಗೆ ಹಚ್ಚಬೇಕು. ವೈಯಕ್ತಿಕ ಅಪಹಾಸ್ಯ ರಾಜಕೀಯ ವಿಮರ್ಶೆಗೆ ಪರ್ಯಾಯ ಆಗಬಾರದು.

ಪಪ್ಪು ಅಥವಾ ಎಂಬ ಹಣೆಪಟ್ಟಿಗಳು ಗಂಭೀರ ಚರ್ಚೆಗೆ ನೆರವಾಗುವುದಿಲ್ಲ. ಅವು ರಾಜಕೀಯ ಸಂವಾದವನ್ನು ವ್ಯಕ್ತಿಕೇಂದ್ರಿತ ಸಂಘರ್ಷಕ್ಕೆ ಸೀಮಿತಗೊಳಿಸುತ್ತವೆ.

ಹನ್ನೆರಡು ವರ್ಷಗಳ ಅಪಹಾಸ್ಯದ ನಡುವೆಯೂ ರಾಹುಲ್ ಗಾಂಧಿ ದೇಶದ ವಿರೋಧ ಪಕ್ಷಗಳ ಪ್ರಮುಖ ನಾಯಕರಾಗಿ ಹೊರಹೊಮ್ಮಿದ್ದಾರೆ. ಈ ವಿದ್ಯಮಾನವು ಮೋದಿ ಅಪಪ್ರಚಾರದ ಮಿತಿಯನ್ನೂ ಬಯಲು ಮಾಡಿದೆ.

ರಾಜಕೀಯ ಎದುರಾಳಿಯನ್ನು ಅಪಹಾಸ್ಯದಿಂದ ಸೋಲಿಸಬಹುದು ಎಂಬ ತಂತ್ರಗಾರಿಕೆ ಎಲ್ಲ ಕಾಲಕ್ಕೂ ಯಶಸ್ಸು ನೀಡುವುದಿಲ್ಲ. ಜನರ ಅನುದಿನದ ಬದುಕಿನ ಪ್ರಶ್ನೆಗಳಿಗೆ ಉತ್ತರ ನೀಡದೆ, ಪ್ರಶ್ನೆಗಳನ್ನು ಕೇಳುವವರಿಗೆ ಹಣೆಪಟ್ಟಿಗಳನ್ನು ಹಚ್ಚುವ ಮೂಲಕ ರಾಜಕೀಯ ಗೆಲುವು ಸಾಧನೆ ತಾತ್ಕಾಲಿಕ.

ಒಬ್ಬರೇ ವಾಲ್ಮೀಕಿ, ಎರಡು ಸಾಮಾಜಿಕ ಜಗತ್ತು! ಉತ್ತರದಲ್ಲಿ ಅತ್ಯಂತ ಶೋಷಿತ 'ದಲಿತ'ರಿಗೆ, ಇಲ್ಲಿ 'ನಾಯಕ'ರ

ಉತ್ತರ ಭಾರತದಲ್ಲಿ ವಾಲ್ಮೀಕಿ ಜಯಂತಿ ಎಂದರೆ ಶತಮಾನಗಳಿಂದ ಜಾತಿ ಅವಮಾನ, ಅಸ್ಪೃಶ್ಯತೆ ಹಾಗೂ ಮಲಹೊರುವ ಪದ್ಧತಿಯ ವಿರುದ್ಧ ಸ್ವಾಭಿಮಾನವನ್ನು ಕಟ್ಟಿಕೊಂಡ ಸಮುದಾಯದ ಆಚರಣೆ. ಕರ್ನಾಟಕದಲ್ಲಿ ಅದೇ ವಾಲ್ಮೀಕಿ ಜಯಂತಿ ಎಂದರೆ, ನಾಯಕ/ಬೇಡ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆ, ಬುಡಕಟ್ಟು ಗುರುತು ಹಾಗೂ ರಾಜಕೀಯ ಹಕ್ಕುಗಳ ಪ್ರತೀಕ.

ಭಾರತದಲ್ಲಿ ಜಾತಿ ವ್ಯವಸ್ಥೆ ಎಂಬುದು ಗಾಢವಾಗಿ ಬೇರೋರಿರುವ ವಿಕೃತಿ ಮತ್ತು ಕ್ರೌರ್ಯ. ಆದಾಗ್ಯೂ, ಈ ಜಾತಿ ವ್ಯವಸ್ಥೆಯಲ್ಲಿ ವಿಚಿತ್ರ ವೈರುಧ್ಯಗಳೂ ಇವೆ. ಆ ವೈರುಧ್ಯಗಳನ್ನ ಅರ್ಥಮಾಡಿಕೊಳ್ಳಬೇಕಾದರೆ, ದೇಶದ ಎರಡು ವಿಭಿನ್ನ ಪ್ರದೇಶಗಳಲ್ಲಿ ಆಚರಿಸಲಾಗುವ ವಾಲ್ಮೀಕಿ ಜಯಂತಿಯನ್ನು ಗಮನಿಸಬೇಕು.

ದೆಹಲಿಯ ವಾಲ್ಮೀಕಿ ಕಾಲೊನಿಗಳು, ಪಂಜಾಬ್‌ನ ವಾಲ್ಮೀಕಿ ಮಂದಿರಗಳು, ಹರಿಯಾಣ ಮತ್ತು ರಾಜಸ್ಥಾನದ ದಲಿತ ಬಡಾವಣೆಗಳಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಗುತ್ತದೆ. ಶತಮಾನಗಳ ಸಾಮಾಜಿಕ ಅವಮಾನವನ್ನು ಎದುರಿಸಿರುವ ಸಮುದಾಯವೊಂದು ತನ್ನ ಸ್ವಾಭಿಮಾನವನ್ನು ಪ್ರತಿಪಾದಿಸುವ ಸಂದರ್ಭವಿದು.

ಅದೇ ದಿನ, ಕರ್ನಾಟಕದಲ್ಲಿಯೂ ವಾಲ್ಮೀಕಿ ಜಯಂತಿ ಆಚರಣೆ ಡನೆಯುತ್ತಿದೆ. ವಾಲ್ಮೀಕಿ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಗುತ್ತದೆ. ನಾಯಕ, ಬೇಡ, ಬೇಡರ ಹಾಗೂ ವಾಲ್ಮೀಕಿ ಸಮುದಾಯದ ಸಂಘಟನೆಗಳು ಮೆರವಣಿಗೆಗಳನ್ನು ನಡೆಸುತ್ತವೆ. ಸಾಮಾಜಿಕ ಹೋರಾಟಗಳ ಇತಿಹಾಸವನ್ನು ಸ್ಮರಿಸುತ್ತವೆ. ಶಿಕ್ಷಣ, ಉದ್ಯೋಗ, ಮೀಸಲಾತಿ ಹಾಗೂ ರಾಜಕೀಯ ಪ್ರಾತಿನಿಧ್ಯದ ಬೇಡಿಕೆಗಳನ್ನು ಮುಂದಿಡುತ್ತವೆ.

ಎರಡೂ ಕಡೆ ವಾಲ್ಮೀಕಿಯೇ ಆರಾಧ್ಯ ವ್ಯಕ್ತಿ. ಎರಡೂ ಸಮುದಾಯಗಳು ತಮ್ಮ ಇತಿಹಾಸವನ್ನು ಅವರೊಂದಿಗೆ ಜೋಡಿಸಿಕೊಂಡಿವೆ. ಆದರೆ, ಅವುಗಳ ಸಾಮಾಜಿಕ ಇತಿಹಾಸ, ಸಾಂಪ್ರದಾಯಿಕ ಉದ್ಯೋಗಗಳು ಹಾಗೂ ಸಂವಿಧಾನಾತ್ಮಕ ವರ್ಗೀಕರಣ ಒಂದೇ ಆಗಿಲ್ಲ. ಉತ್ತರ ಭಾರತದ ವಾಲ್ಮೀಕಿ (ಬಾಲ್ಮೀಕಿ) ಸಮುದಾಯವು ಹಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ್ದರೆ, ಕರ್ನಾಟಕದ ನಾಯಕ ಬೇಡ ವಾಲ್ಮೀಕಿ ಸಮುದಾಯವು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿದೆ.

ಇದು ಕೇವಲ ಆಡಳಿತಾತ್ಮಕ ವರ್ಗೀಕರಣದ ವ್ಯತ್ಯಾಸ ಮಾತ್ರವಲ್ಲ, ಭಾರತದ ಸಾಮಾಜಿಕ ಶ್ರೇಣೀಕರಣ, ಪ್ರಾದೇಶಿಕ ಇತಿಹಾಸ, ಸಮುದಾಯದ ಅಸ್ಮಿತೆಯ ವಿಷಯವೂ ಕೂಡ.


ಉತ್ತರ ಭಾರತದ ವಾಲ್ಮೀಕಿಗಳು ಯಾರು?

ಉತ್ತರ ಭಾರತದ ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ ಹಾಗೂ ಉತ್ತರ ಪ್ರದೇಶದ ಹಲವು ಪ್ರದೇಶಗಳಲ್ಲಿ ವಾಲ್ಮೀಕಿ (ಬಾಲ್ಮೀಕಿ) ಎಂಬ ಹೆಸರು ನಿರ್ದಿಷ್ಟ ದಲಿತ ಸಮುದಾಯದ ಸಾಮಾಜಿಕ ಗುರುತು. ಐತಿಹಾಸಿಕವಾಗಿ ಈ ಸಮುದಾಯದ ದೊಡ್ಡ ಭಾಗವನ್ನು ಪೌರ ಕಾರ್ಮಿಕ ಅರ್ಥಾತ್ ಮಲ ಹೊರುವ ಕೆಲಸಗಳಿಗೆ ಕಟ್ಟಿಹಾಕಲಾಗಿತ್ತು. ಇವರನ್ನು ಭಂಗಿ, ಚೂಹ್ರಾ, ಮೆಹ್ತರ್ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇವುಗಳಲ್ಲಿ ಕೆಲವು ಹೆಸರುಗಳು ಜಾತಿ ಅವಮಾನದ ಇತಿಹಾಸ ಹೊಂದಿವೆ.

ಈ ಸಮುದಾಯಗಳ ಜನರು ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆ, ವಸತಿ ಪ್ರದೇಶಗಳಲ್ಲಿ ಪ್ರತ್ಯೇಕತೆ, ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳಿಂದ ವಂಚನೆಗೆ ತುತ್ತಾಗಿದ್ದರು. ಈ ವಂಚನೆಗಳನ್ನ ಮೀರಿ ಮುಂದೆ ಬರಲು ಅವರು ಎದುರಿಸಿದ್ದ ಸಾಂಪ್ರದಾಯಿಕ ಅಡೆತಡೆಗಳು ಅಷ್ಟಿಷ್ಟಲ್ಲ. ಇಂದಿಗೂ ಕೂಡ ಈ ಅಡೆತಡೆಗಳು ಮತ್ತು ಜಾತಿ ಶೋಷಣೆಯ ಪರಿಣಾಮಗಳು ಸಂಪೂರ್ಣವಾಗಿ ಅಳಿದುಹೋಗಿಲ್ಲ. ವರದಿಗಳು ಹೇಳುವಂತೆ, ಉತ್ತರ ಭಾರತದಲ್ಲಿ ಪರಿಶಿಷ್ಟ ಜಾತಿಗಳಲ್ಲಿಯೇ ವಾಲ್ಮೀಕಿ ಸಮುದಾಯವು ತೀವ್ರ ಅಂಚಿನಲ್ಲಿರುವ ಸಮುದಾಯಗಳಲ್ಲಿ ಒಂದಾಗಿದೆ.

ಅವಮಾನಕರ ಜಾತಿ ಹೆಸರಿನಿಂದ ವಾಲ್ಮೀಕಿ ಗುರುತಿನತ್ತ

ಉತ್ತರ ಭಾರತದ ವಾಲ್ಮೀಕಿ ಸಮುದಾಯದ ಸಾಮಾಜಿಕ ಇತಿಹಾಸದಲ್ಲಿ 20ನೇ ಶತಮಾನದಲ್ಲಿ ಪ್ರಮುಖ ಬದಲಾವಣೆಯೊಂದು ಘಟಿಸಿತು. ಯಾರನ್ನು ಸಮಾಜ ಅಸ್ಪೃಶ್ಯರೆಂದು ಗುರುತಿಸಲಾಗಿತ್ತೋ, ಅದೇ ಸಮುದಾಯದ ವಾಲ್ಮೀಕಿಯನ್ನು ರಾಮಾಯಣದ ರಚನಕಾರನೆಂದು ಗೌರವಿಸಲ್ಪಡಲಾಗುತ್ತಿತ್ತು. ತಮ್ಮದೇ ಸಮುದಾಯದ



ನಾಯಕನನ್ನು ಗೌರವಿಸುವ ಈ ಸಮಾಜ, ತಮ್ಮನ್ನು ಕೀಳಾಗಿ ಕಾಣುವುದರ ವಿರುದ್ಧ ಸಿಡಿದ ಸಮುದಾಯಗಳು, ಸಮಾಜ ಹೇರಿದ್ದ ಅವಮಾನಕರ ಗುರುತನ್ನು ತಿರಸ್ಕರಿಸಿ, ಸಾಂಸ್ಕೃತಿಕ ಗೌರವವನ್ನು ಪ್ರತಿಪಾದಿಸಲು ಪ್ರಯತ್ನ ನಡೆಸಿದವು.

ಈ ಸಮುದಾಯಗಳು, ತಮ್ಮ ಮೇಲೆ ಹೇರಲಾಗಿದ್ದ ಅವಮಾನಕರ ಜಾತಿ ಹೆಸರುಗಳನ್ನು ತಿರಸ್ಕರಿಸಿ, ಮಹರ್ಷಿ ವಾಲ್ಮೀಕಿಯ ಹೆಸರನ್ನು ಸಮುದಾಯದ ಸ್ವಾಭಿಮಾನದ ಸಂಕೇತವಾಗಿ ಸ್ವೀಕರಿಸಿದವು. ''192030ರ ದಶಕಗಳಲ್ಲಿ ವಾಲ್ಮೀಕಿ ಹೆಸರು ಉತ್ತರ ಭಾರತದ ಸ್ವಚ್ಛತಾ ಕೆಲಸಕ್ಕೆ ಸಂಬಂಧಿಸಿದ್ದ ಸಮುದಾಯಗಳಲ್ಲಿ ಗೌರವಯುತ ಸಮುದಾಯ ಗುರುತಾಗಿ ನೆಲೆಯೂರಿತು'' ಎಂದು ಸಂಶೋಧಕಿ ಮಾಯಾ ಸುಜುಕಿ ಅವರ ಅಧ್ಯಯನ ವರದಿಯೂ ಹೇಳುತ್ತದೆ.

ಇನ್ನು, ಕರ್ನಾಟಕದಲ್ಲಿ ಮಹರ್ಷಿ ವಾಲ್ಮೀಕಿಯನ್ನು ತಮ್ಮ ಮೂಲಪುರುಷನೆಂದು ಗೌರವಿಸುವ ಪ್ರಮುಖ ಸಮುದಾಯ ನಾಯಕ/ಬೇಡ ಸಮುದಾಯ. ಈ ಸಮುದಾಯದ ಸಾಮಾಜಿಕ ಇತಿಹಾಸ ಉತ್ತರ ಭಾರತದ ವಾಲ್ಮೀಕಿ ದಲಿತರ ಇತಿಹಾಸಕ್ಕಿಂತ ವಿಭಿನ್ನವಾಗಿದೆ. ಕರ್ನಾಟಕದ ಬೇಡ, ಬೇಡರ, ನಾಯಕ, ನಾಯಕಮಕ್ಕಳು, ತಳವಾರ ಸಮುದಾಯಗಳ ಕೆಲವು ಗುಂಪುಗಳು ಬೇಟೆ, ಕಾವಲು, ಸೈನಿಕ ಸೇವೆ, ಗ್ರಾಮ ರಕ್ಷಣೆ, ಪಶುಪಾಲನೆ ಹಾಗೂ ಕೃಷಿಯೊಂದಿಗೆ ಸಂಬಂಧ ಹೊಂದಿದ್ದವು. ಕೆಲವು ಕಾಲಘಟ್ಟಗಳಲ್ಲಿ ಒಂದಷ್ಟು ನಾಯಕ ಕುಟುಂಬಗಳು ಸ್ಥಳೀಯ ಆಡಳಿತ, ಪಾಳೇಗಾರಿಕೆ ಹಾಗೂ ಸೈನಿಕ ನಾಯಕತ್ವದಲ್ಲಿಯೂ ಪಾತ್ರ ವಹಿಸಿದ್ದವು. ಆದರೆ, ಸಮುದಾಯದಲ್ಲಿ ಭೂಹೀನ ಕಾರ್ಮಿಕರು, ಸಣ್ಣ ರೈತರು, ಕೃಷಿಕೂಲಿಕಾರರು ಹಾಗೂ ಆರ್ಥಿಕವಾಗಿ ಹಿಂದುಳಿದವರ ಸಂಖ್ಯೆಯೇ ಹೆಚ್ಚು.

ಉತ್ತರ ಭಾರತದಲ್ಲಿ ವಾಲ್ಮೀಕಿ ಜಯಂತಿ: ಆಚರಣೆಗಿಂತ ಮಿಗಿಲಾದ ಸ್ವಾಭಿಮಾನದ ಹೋರಾಟ

ಉತ್ತರ ಭಾರತದ ವಾಲ್ಮೀಕಿ ಜಯಂತಿಯನ್ನು ಕೇವಲ ರಾಮಾಯಣದ ಆದಿಕವಿಗೆ ಸಲ್ಲಿಸುವ ಗೌರವ ಎಂದಷ್ಟೇ ನೋಡಲಾಗುವುದಿಲ್ಲ. ಅನೇಕ ಭಾಗಗಳಲ್ಲಿ ವಾಲ್ಮೀಕಿ ಹೆಸರಿನಲ್ಲಿ ವಿಶೇಷ ಪೂಜೆಗಳು, ಶೋಭಾಯಾತ್ರೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಮುದಾಯ ಸಭೆಗಳು ನಡೆಯುತ್ತವೆ. ವಾಲ್ಮೀಕಿ ಮೂರ್ತಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವ ಸಂಪ್ರದಾಯವೂ ದೇಶದ ವಿವಿಧ ಭಾಗಗಳಲ್ಲಿ ಕಂಡುಬರುತ್ತದೆ.

ಇದೆಲ್ಲವೂ ಕೇವಲ ಸಂಭ್ರಮದ ಭಾಗವಲ್ಲ; ಬದಲಾಗಿ, ಶತಮಾನಗಳಿಂದ ತಮ್ಮನ್ನು ಅಸ್ಪೃಶ್ಯರೆಂದು ಪರಿಗಣಿಸಿದ್ದ ಸಮಾಜದ ಎದುರು ತಾವು ಜ್ಞಾನ, ಸಾಹಿತ್ಯ ಹಾಗೂ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿರುವ ಸಮುದಾಯವೆಂದು ಪ್ರತಿಪಾದಿಸುವುದರ ಸಂಕೇತವೂ ಆಗಿದೆ ಎಂದು ಸಮುದಾಯ ಭಾವಿಸಿದೆ.

ಕರ್ನಾಟಕದಲ್ಲಿ ವಾಲ್ಮೀಕಿ ಜಯಂತಿ: ಸಾಂಸ್ಕೃತಿಕ ಅಸ್ಮಿತೆ ಮತ್ತು ರಾಜಕೀಯ ಪ್ರಾತಿನಿಧ್ಯ

ಕರ್ನಾಟಕದಲ್ಲಿ ವಾಲ್ಮೀಕಿ ಜಯಂತಿಗೆ ಉತ್ತರ ಭಾರತಕ್ಕಿಂತ ವಿಭಿನ್ನ ಆಯಾಮವಿದೆ. ಇಲ್ಲಿ ನಾಯಕ/ಬೇಡ ಸಮುದಾಯವು ಮಹರ್ಷಿ ವಾಲ್ಮೀಕಿಯನ್ನು ತನ್ನ ಸಾಂಸ್ಕೃತಿಕ ಮೂಲಪುರುಷನಾಗಿ ಗೌರವಿಸುತ್ತದೆ. ಸಮುದಾಯದ ವಿವಿಧ ಸಂಘಟನೆಗಳು ವಾಲ್ಮೀಕಿ ಜಯಂತಿಯನ್ನು ತಮ್ಮ ಇತಿಹಾಸ, ಸಾಮಾಜಿಕ ಅಸ್ಮಿತೆ ಹಾಗೂ ಸಮುದಾಯದ ಒಗ್ಗಟ್ಟನ್ನು ಪ್ರದರ್ಶಿಸುವ ಸಂದರ್ಭವಾಗಿ ಬಳಸುತ್ತವೆ.

ಕರ್ನಾಟಕದಲ್ಲಿ ವಾಲ್ಮೀಕಿ ಜಯಂತಿಯನ್ನು ರಾಜ್ಯ ಸರ್ಕಾರವು ಅಧಿಕೃತವಾಗಿ ಆಚರಿಸುತ್ತದೆ. 2025ರ ಸರ್ಕಾರಿ ರಜಾಪಟ್ಟಿಯಲ್ಲಿಯೂ ಅಕ್ಟೋಬರ್ 7ರಂದು ಮಹರ್ಷಿ ವಾಲ್ಮೀಕಿ ಜಯಂತಿಗೆ ಸಾರ್ವತ್ರಿಕ ರಜೆ ಘೋಷಿಸಲಾಗಿತ್ತು. ವಾಲ್ಮೀಕಿ ಜಯಂತಿಯ ಕಾರ್ಯಕ್ರಮಗಳಲ್ಲಿ ವಾಲ್ಮೀಕಿ ಅವರ ಸಾಹಿತ್ಯಿಕ ಕೊಡುಗೆಯ ಜೊತೆಗೆ ಸಮುದಾಯದ ಶೈಕ್ಷಣಿಕ ಪ್ರಗತಿ, ಉದ್ಯೋಗಾವಕಾಶಗಳು, ಮೀಸಲಾತಿ ಹಾಗೂ ಅಭಿವೃದ್ಧಿ ಕುರಿತೂ ಚರ್ಚೆಗಳು ನಡೆಯುತ್ತವೆ.

ವಿಶೇಷವಾಗಿ ಪರಿಶಿಷ್ಟ ಪಂಗಡದ ಮೀಸಲಾತಿಯ ಪ್ರಮಾಣ ಹೆಚ್ಚಿಸಬೇಕೆಂಬ ಹೋರಾಟಗಳಲ್ಲಿ ವಾಲ್ಮೀಕಿ ಸಮುದಾಯದ ಮುಖಂಡರ ಪಾತ್ರ ಹೆಚ್ಚು. ಈ ಹೋರಾಟಗಳ ಫಲವಾಗಿ, 2022ರಲ್ಲಿ ಕರ್ನಾಟಕ ಸರ್ಕಾರ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು 3%ರಿಂದ 7%ಗೆ ಹೆಚ್ಚಿಸುವ ನಿರ್ಧಾರ ಕೈಗೊಂಡಿತು. ಆದಾಗ್ಯೂ, ನಾನಾ ತೊಡಕುಗಳಿಂದಾಗಿ ಈ ಪರಿಷ್ಕೃತ ಮೀಸಲಾತಿ ಜಾರಿಗೆ ಬಂದಿಲ್ಲ.

ವಾಲ್ಮೀಕಿ ಜಯಂತಿಯ ನಿಜವಾದ ಸಂದೇಶವೇನು?

ಉತ್ತರ ಭಾರತದಲ್ಲಿ ವಾಲ್ಮೀಕಿ ಜಯಂತಿಯನ್ನು ಆಚರಿಸುವ ದಲಿತ ಸಮುದಾಯಗಳ ಇತಿಹಾಸವು ಜಾತಿ ಅವಮಾನವನ್ನು ಎದುರಿಸಿ ಗೌರವಯುತ ಬದುಕನ್ನು ಕಟ್ಟಿಕೊಳ್ಳುವ ಹೋರಾಟದೊಂದಿಗೆ ಬೆಸೆದುಕೊಂಡಿದೆ.

ಕರ್ನಾಟಕದಲ್ಲಿ ಅದೇ ಜಯಂತಿ ನಾಯಕ/ಬೇಡ ಸಮುದಾಯದ ಬುಡಕಟ್ಟು ಅಸ್ಮಿತೆ, ಸಾಮಾಜಿಕ ಸಂಘಟನೆ ಹಾಗೂ ರಾಜಕೀಯ ಪ್ರಾತಿನಿಧ್ಯದ ಆಶಯಗಳೊಂದಿಗೆ ಬೆಸೆದುಕೊಂಡಿದೆ. ಎರಡೂ ಆಚರಣೆಗಳು ತಮ್ಮದೇ ಆದ ಮಹತ್ವವನ್ನು ಹೊಂದಿವೆ. ಆದರೆ, ಮಹರ್ಷಿ ವಾಲ್ಮೀಕಿಯ ಹೆಸರಿನಲ್ಲಿ ನಡೆಯುವ ಉತ್ಸವಗಳು ಅವರೊಂದಿಗೆ ಗುರುತಿಸಿಕೊಳ್ಳುವ ಸಮುದಾಯಗಳ ನೈಜ ಬದುಕಿನ ಸಮಸ್ಯೆಗಳನ್ನೂ ಮುನ್ನೆಲೆಗೆ ತರಬೇಕಾಗಿದೆ.

ಉತ್ತರ ಭಾರತದಲ್ಲಿ ವಾಲ್ಮೀಕಿ ಜಯಂತಿಯ ಮೆರವಣಿಗೆಗಳು ನಡೆಯುವಾಗ, ಅದೇ ಸಮುದಾಯದ ಸ್ವಚ್ಛತಾ ಕಾರ್ಮಿಕರು ಅಪಾಯಕಾರಿ ಪರಿಸ್ಥಿತಿಗಳಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಏಕೆ ಮುಂದುವರಿದಿದೆ ಎಂಬುದನ್ನು ಪ್ರಶ್ನಿಸಬೇಕು. ಕರ್ನಾಟಕದಲ್ಲಿ ವಾಲ್ಮೀಕಿ ಜಯಂತಿಯ ವೇದಿಕೆಗಳಲ್ಲಿ ರಾಜಕೀಯ ನಾಯಕರು ಭಾಷಣ ಮಾಡುವಾಗ, ಸಮುದಾಯದ ಬಡ ಕುಟುಂಬಗಳಿಗೆ ಶಿಕ್ಷಣ, ಭೂಮಿ, ಉದ್ಯೋಗ ಮತ್ತು ಅಭಿವೃದ್ಧಿಯ ಅವಕಾಶಗಳು ಎಷ್ಟು ತಲುಪಿವೆ ಎಂಬುದನ್ನು ಪರಿಶೀಲಿಸಬೇಕು. ಇದು ಮಾನವ ಘನತೆ ಮತ್ತು ಸಮಾನತೆಯ ಆಶಯವೂ ಆಗಿದೆ.

ಒಬ್ಬರೇ ವಾಲ್ಮೀಕಿ, ಎರಡು ಸಾಮಾಜಿಕ ಜಗತ್ತು! ಉತ್ತರದಲ್ಲಿ ಅತ್ಯಂತ ಶೋಷಿತ 'ದಲಿತ'ರಿಗೆ, ಇಲ್ಲಿ 'ನಾಯಕ'ರ

ಉತ್ತರ ಭಾರತದಲ್ಲಿ ವಾಲ್ಮೀಕಿ ಜಯಂತಿ ಎಂದರೆ ಶತಮಾನಗಳಿಂದ ಜಾತಿ ಅವಮಾನ, ಅಸ್ಪೃಶ್ಯತೆ ಹಾಗೂ ಮಲಹೊರುವ ಪದ್ಧತಿಯ ವಿರುದ್ಧ ಸ್ವಾಭಿಮಾನವನ್ನು ಕಟ್ಟಿಕೊಂಡ ಸಮುದಾಯದ ಆಚರಣೆ. ಕರ್ನಾಟಕದಲ್ಲಿ ಅದೇ ವಾಲ್ಮೀಕಿ ಜಯಂತಿ ಎಂದರೆ, ನಾಯಕ/ಬೇಡ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆ, ಬುಡಕಟ್ಟು ಗುರುತು ಹಾಗೂ ರಾಜಕೀಯ ಹಕ್ಕುಗಳ ಪ್ರತೀಕ.

ಭಾರತದಲ್ಲಿ ಜಾತಿ ವ್ಯವಸ್ಥೆ ಎಂಬುದು ಗಾಢವಾಗಿ ಬೇರೋರಿರುವ ವಿಕೃತಿ ಮತ್ತು ಕ್ರೌರ್ಯ. ಆದಾಗ್ಯೂ, ಈ ಜಾತಿ ವ್ಯವಸ್ಥೆಯಲ್ಲಿ ವಿಚಿತ್ರ ವೈರುಧ್ಯಗಳೂ ಇವೆ. ಆ ವೈರುಧ್ಯಗಳನ್ನ ಅರ್ಥಮಾಡಿಕೊಳ್ಳಬೇಕಾದರೆ, ದೇಶದ ಎರಡು ವಿಭಿನ್ನ ಪ್ರದೇಶಗಳಲ್ಲಿ ಆಚರಿಸಲಾಗುವ ವಾಲ್ಮೀಕಿ ಜಯಂತಿಯನ್ನು ಗಮನಿಸಬೇಕು.

ದೆಹಲಿಯ ವಾಲ್ಮೀಕಿ ಕಾಲೊನಿಗಳು, ಪಂಜಾಬ್‌ನ ವಾಲ್ಮೀಕಿ ಮಂದಿರಗಳು, ಹರಿಯಾಣ ಮತ್ತು ರಾಜಸ್ಥಾನದ ದಲಿತ ಬಡಾವಣೆಗಳಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಗುತ್ತದೆ. ಶತಮಾನಗಳ ಸಾಮಾಜಿಕ ಅವಮಾನವನ್ನು ಎದುರಿಸಿರುವ ಸಮುದಾಯವೊಂದು ತನ್ನ ಸ್ವಾಭಿಮಾನವನ್ನು ಪ್ರತಿಪಾದಿಸುವ ಸಂದರ್ಭವಿದು.

ಅದೇ ದಿನ, ಕರ್ನಾಟಕದಲ್ಲಿಯೂ ವಾಲ್ಮೀಕಿ ಜಯಂತಿ ಆಚರಣೆ ಡನೆಯುತ್ತಿದೆ. ವಾಲ್ಮೀಕಿ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಗುತ್ತದೆ. ನಾಯಕ, ಬೇಡ, ಬೇಡರ ಹಾಗೂ ವಾಲ್ಮೀಕಿ ಸಮುದಾಯದ ಸಂಘಟನೆಗಳು ಮೆರವಣಿಗೆಗಳನ್ನು ನಡೆಸುತ್ತವೆ. ಸಾಮಾಜಿಕ ಹೋರಾಟಗಳ ಇತಿಹಾಸವನ್ನು ಸ್ಮರಿಸುತ್ತವೆ. ಶಿಕ್ಷಣ, ಉದ್ಯೋಗ, ಮೀಸಲಾತಿ ಹಾಗೂ ರಾಜಕೀಯ ಪ್ರಾತಿನಿಧ್ಯದ ಬೇಡಿಕೆಗಳನ್ನು ಮುಂದಿಡುತ್ತವೆ.

ಎರಡೂ ಕಡೆ ವಾಲ್ಮೀಕಿಯೇ ಆರಾಧ್ಯ ವ್ಯಕ್ತಿ. ಎರಡೂ ಸಮುದಾಯಗಳು ತಮ್ಮ ಇತಿಹಾಸವನ್ನು ಅವರೊಂದಿಗೆ ಜೋಡಿಸಿಕೊಂಡಿವೆ. ಆದರೆ, ಅವುಗಳ ಸಾಮಾಜಿಕ ಇತಿಹಾಸ, ಸಾಂಪ್ರದಾಯಿಕ ಉದ್ಯೋಗಗಳು ಹಾಗೂ ಸಂವಿಧಾನಾತ್ಮಕ ವರ್ಗೀಕರಣ ಒಂದೇ ಆಗಿಲ್ಲ. ಉತ್ತರ ಭಾರತದ ವಾಲ್ಮೀಕಿ (ಬಾಲ್ಮೀಕಿ) ಸಮುದಾಯವು ಹಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ್ದರೆ, ಕರ್ನಾಟಕದ ನಾಯಕ ಬೇಡ ವಾಲ್ಮೀಕಿ ಸಮುದಾಯವು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿದೆ.

ಇದು ಕೇವಲ ಆಡಳಿತಾತ್ಮಕ ವರ್ಗೀಕರಣದ ವ್ಯತ್ಯಾಸ ಮಾತ್ರವಲ್ಲ, ಭಾರತದ ಸಾಮಾಜಿಕ ಶ್ರೇಣೀಕರಣ, ಪ್ರಾದೇಶಿಕ ಇತಿಹಾಸ, ಸಮುದಾಯದ ಅಸ್ಮಿತೆಯ ವಿಷಯವೂ ಕೂಡ.

ಉತ್ತರ ಭಾರತದ ವಾಲ್ಮೀಕಿಗಳು ಯಾರು?

ಉತ್ತರ ಭಾರತದ ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ ಹಾಗೂ ಉತ್ತರ ಪ್ರದೇಶದ ಹಲವು ಪ್ರದೇಶಗಳಲ್ಲಿ ವಾಲ್ಮೀಕಿ (ಬಾಲ್ಮೀಕಿ) ಎಂಬ ಹೆಸರು ನಿರ್ದಿಷ್ಟ ದಲಿತ ಸಮುದಾಯದ ಸಾಮಾಜಿಕ ಗುರುತು. ಐತಿಹಾಸಿಕವಾಗಿ ಈ ಸಮುದಾಯದ ದೊಡ್ಡ ಭಾಗವನ್ನು ಪೌರ ಕಾರ್ಮಿಕ ಅರ್ಥಾತ್ ಮಲ ಹೊರುವ ಕೆಲಸಗಳಿಗೆ ಕಟ್ಟಿಹಾಕಲಾಗಿತ್ತು. ಇವರನ್ನು ಭಂಗಿ, ಚೂಹ್ರಾ, ಮೆಹ್ತರ್ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇವುಗಳಲ್ಲಿ ಕೆಲವು ಹೆಸರುಗಳು ಜಾತಿ ಅವಮಾನದ ಇತಿಹಾಸ ಹೊಂದಿವೆ.

ಈ ಸಮುದಾಯಗಳ ಜನರು ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆ, ವಸತಿ ಪ್ರದೇಶಗಳಲ್ಲಿ ಪ್ರತ್ಯೇಕತೆ, ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳಿಂದ ವಂಚನೆಗೆ ತುತ್ತಾಗಿದ್ದರು. ಈ ವಂಚನೆಗಳನ್ನ ಮೀರಿ ಮುಂದೆ ಬರಲು ಅವರು ಎದುರಿಸಿದ್ದ ಸಾಂಪ್ರದಾಯಿಕ ಅಡೆತಡೆಗಳು ಅಷ್ಟಿಷ್ಟಲ್ಲ. ಇಂದಿಗೂ ಕೂಡ ಈ ಅಡೆತಡೆಗಳು ಮತ್ತು ಜಾತಿ ಶೋಷಣೆಯ ಪರಿಣಾಮಗಳು ಸಂಪೂರ್ಣವಾಗಿ ಅಳಿದುಹೋಗಿಲ್ಲ. ವರದಿಗಳು ಹೇಳುವಂತೆ, ಉತ್ತರ ಭಾರತದಲ್ಲಿ ಪರಿಶಿಷ್ಟ ಜಾತಿಗಳಲ್ಲಿಯೇ ವಾಲ್ಮೀಕಿ ಸಮುದಾಯವು ತೀವ್ರ ಅಂಚಿನಲ್ಲಿರುವ ಸಮುದಾಯಗಳಲ್ಲಿ ಒಂದಾಗಿದೆ.

ಅವಮಾನಕರ ಜಾತಿ ಹೆಸರಿನಿಂದ ವಾಲ್ಮೀಕಿ ಗುರುತಿನತ್ತ

ಉತ್ತರ ಭಾರತದ ವಾಲ್ಮೀಕಿ ಸಮುದಾಯದ ಸಾಮಾಜಿಕ ಇತಿಹಾಸದಲ್ಲಿ 20ನೇ ಶತಮಾನದಲ್ಲಿ ಪ್ರಮುಖ ಬದಲಾವಣೆಯೊಂದು ಘಟಿಸಿತು. ಯಾರನ್ನು ಸಮಾಜ ಅಸ್ಪೃಶ್ಯರೆಂದು ಗುರುತಿಸಲಾಗಿತ್ತೋ, ಅದೇ ಸಮುದಾಯದ ವಾಲ್ಮೀಕಿಯನ್ನು ರಾಮಾಯಣದ ರಚನಕಾರನೆಂದು ಗೌರವಿಸಲ್ಪಡಲಾಗುತ್ತಿತ್ತು. ತಮ್ಮದೇ ಸಮುದಾಯದ ನಾಯಕನನ್ನು ಗೌರವಿಸುವ ಈ ಸಮಾಜ, ತಮ್ಮನ್ನು ಕೀಳಾಗಿ ಕಾಣುವುದರ ವಿರುದ್ಧ ಸಿಡಿದ ಸಮುದಾಯಗಳು, ಸಮಾಜ ಹೇರಿದ್ದ ಅವಮಾನಕರ ಗುರುತನ್ನು ತಿರಸ್ಕರಿಸಿ, ಸಾಂಸ್ಕೃತಿಕ ಗೌರವವನ್ನು ಪ್ರತಿಪಾದಿಸಲು ಪ್ರಯತ್ನ ನಡೆಸಿದವು.

ಈ ಸಮುದಾಯಗಳು, ತಮ್ಮ ಮೇಲೆ ಹೇರಲಾಗಿದ್ದ ಅವಮಾನಕರ ಜಾತಿ ಹೆಸರುಗಳನ್ನು ತಿರಸ್ಕರಿಸಿ, ಮಹರ್ಷಿ ವಾಲ್ಮೀಕಿಯ ಹೆಸರನ್ನು ಸಮುದಾಯದ ಸ್ವಾಭಿಮಾನದ ಸಂಕೇತವಾಗಿ ಸ್ವೀಕರಿಸಿದವು. ''192030ರ ದಶಕಗಳಲ್ಲಿ ವಾಲ್ಮೀಕಿ ಹೆಸರು ಉತ್ತರ ಭಾರತದ ಸ್ವಚ್ಛತಾ ಕೆಲಸಕ್ಕೆ ಸಂಬಂಧಿಸಿದ್ದ ಸಮುದಾಯಗಳಲ್ಲಿ ಗೌರವಯುತ ಸಮುದಾಯ ಗುರುತಾಗಿ ನೆಲೆಯೂರಿತು'' ಎಂದು ಸಂಶೋಧಕಿ ಮಾಯಾ ಸುಜುಕಿ ಅವರ ಅಧ್ಯಯನ ವರದಿಯೂ ಹೇಳುತ್ತದೆ.

ಇನ್ನು, ಕರ್ನಾಟಕದಲ್ಲಿ ಮಹರ್ಷಿ ವಾಲ್ಮೀಕಿಯನ್ನು ತಮ್ಮ ಮೂಲಪುರುಷನೆಂದು ಗೌರವಿಸುವ ಪ್ರಮುಖ ಸಮುದಾಯ ನಾಯಕ/ಬೇಡ ಸಮುದಾಯ. ಈ ಸಮುದಾಯದ ಸಾಮಾಜಿಕ ಇತಿಹಾಸ ಉತ್ತರ ಭಾರತದ ವಾಲ್ಮೀಕಿ ದಲಿತರ ಇತಿಹಾಸಕ್ಕಿಂತ ವಿಭಿನ್ನವಾಗಿದೆ. ಕರ್ನಾಟಕದ ಬೇಡ, ಬೇಡರ, ನಾಯಕ, ನಾಯಕಮಕ್ಕಳು, ತಳವಾರ ಸಮುದಾಯಗಳ ಕೆಲವು ಗುಂಪುಗಳು ಬೇಟೆ, ಕಾವಲು, ಸೈನಿಕ ಸೇವೆ, ಗ್ರಾಮ ರಕ್ಷಣೆ, ಪಶುಪಾಲನೆ ಹಾಗೂ ಕೃಷಿಯೊಂದಿಗೆ ಸಂಬಂಧ ಹೊಂದಿದ್ದವು. ಕೆಲವು ಕಾಲಘಟ್ಟಗಳಲ್ಲಿ ಒಂದಷ್ಟು ನಾಯಕ ಕುಟುಂಬಗಳು ಸ್ಥಳೀಯ ಆಡಳಿತ, ಪಾಳೇಗಾರಿಕೆ ಹಾಗೂ ಸೈನಿಕ ನಾಯಕತ್ವದಲ್ಲಿಯೂ ಪಾತ್ರ ವಹಿಸಿದ್ದವು. ಆದರೆ, ಸಮುದಾಯದಲ್ಲಿ ಭೂಹೀನ ಕಾರ್ಮಿಕರು, ಸಣ್ಣ ರೈತರು, ಕೃಷಿಕೂಲಿಕಾರರು ಹಾಗೂ ಆರ್ಥಿಕವಾಗಿ ಹಿಂದುಳಿದವರ ಸಂಖ್ಯೆಯೇ ಹೆಚ್ಚು.

ಉತ್ತರ ಭಾರತದಲ್ಲಿ ವಾಲ್ಮೀಕಿ ಜಯಂತಿ: ಆಚರಣೆಗಿಂತ ಮಿಗಿಲಾದ ಸ್ವಾಭಿಮಾನದ ಹೋರಾಟ

ಉತ್ತರ ಭಾರತದ ವಾಲ್ಮೀಕಿ ಜಯಂತಿಯನ್ನು ಕೇವಲ ರಾಮಾಯಣದ ಆದಿಕವಿಗೆ ಸಲ್ಲಿಸುವ ಗೌರವ ಎಂದಷ್ಟೇ ನೋಡಲಾಗುವುದಿಲ್ಲ. ಅನೇಕ ಭಾಗಗಳಲ್ಲಿ ವಾಲ್ಮೀಕಿ ಹೆಸರಿನಲ್ಲಿ ವಿಶೇಷ ಪೂಜೆಗಳು, ಶೋಭಾಯಾತ್ರೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಮುದಾಯ ಸಭೆಗಳು ನಡೆಯುತ್ತವೆ. ವಾಲ್ಮೀಕಿ ಮೂರ್ತಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವ ಸಂಪ್ರದಾಯವೂ ದೇಶದ ವಿವಿಧ ಭಾಗಗಳಲ್ಲಿ ಕಂಡುಬರುತ್ತದೆ.

ಇದೆಲ್ಲವೂ ಕೇವಲ ಸಂಭ್ರಮದ ಭಾಗವಲ್ಲ; ಬದಲಾಗಿ, ಶತಮಾನಗಳಿಂದ ತಮ್ಮನ್ನು ಅಸ್ಪೃಶ್ಯರೆಂದು ಪರಿಗಣಿಸಿದ್ದ ಸಮಾಜದ ಎದುರು ತಾವು ಜ್ಞಾನ, ಸಾಹಿತ್ಯ ಹಾಗೂ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿರುವ ಸಮುದಾಯವೆಂದು ಪ್ರತಿಪಾದಿಸುವುದರ ಸಂಕೇತವೂ ಆಗಿದೆ ಎಂದು ಸಮುದಾಯ ಭಾವಿಸಿದೆ.

ಕರ್ನಾಟಕದಲ್ಲಿ ವಾಲ್ಮೀಕಿ ಜಯಂತಿ: ಸಾಂಸ್ಕೃತಿಕ ಅಸ್ಮಿತೆ ಮತ್ತು ರಾಜಕೀಯ ಪ್ರಾತಿನಿಧ್ಯ

ಕರ್ನಾಟಕದಲ್ಲಿ ವಾಲ್ಮೀಕಿ ಜಯಂತಿಗೆ ಉತ್ತರ ಭಾರತಕ್ಕಿಂತ ವಿಭಿನ್ನ ಆಯಾಮವಿದೆ. ಇಲ್ಲಿ ನಾಯಕ/ಬೇಡ ಸಮುದಾಯವು ಮಹರ್ಷಿ ವಾಲ್ಮೀಕಿಯನ್ನು ತನ್ನ ಸಾಂಸ್ಕೃತಿಕ ಮೂಲಪುರುಷನಾಗಿ ಗೌರವಿಸುತ್ತದೆ. ಸಮುದಾಯದ ವಿವಿಧ ಸಂಘಟನೆಗಳು ವಾಲ್ಮೀಕಿ ಜಯಂತಿಯನ್ನು ತಮ್ಮ ಇತಿಹಾಸ, ಸಾಮಾಜಿಕ ಅಸ್ಮಿತೆ ಹಾಗೂ ಸಮುದಾಯದ ಒಗ್ಗಟ್ಟನ್ನು ಪ್ರದರ್ಶಿಸುವ ಸಂದರ್ಭವಾಗಿ ಬಳಸುತ್ತವೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR